ಇಂದು ಲಂಕಾ ಕ್ರಿಕೆಟ್ ತಂಡ ಪಾಕಿಸ್ತಾನಕ್ಕೆ

ಇಸ್ಲಾಮಾಬಾದ್, ಅ. 6– ಭಾರತದ ವಿರುದ್ಧ ಇತ್ತೀಚೆಗೆ ಸಾಧಿಸಿದ ಸರಣಿ ಜಯದ ಬೆಂಬಲದೊಂದಿಗೆ ಆತ್ಮ ವಿಶ್ವಾಸ ತುಂಬಿಕೊಂಡಿರುವ ಶ್ರೀಲಂಕಾ ಕ್ರಿಕೆಟ್ ತಂಡ ನಾಳೆ (ಸೋಮವಾರ) ಇಲ್ಲಿಗೆ ತಲುಪಲಿದೆ.

ಅಧಿಕೃತ ಟೆಸ್ಟ್ ಮಾನ್ಯತೆ ಪಡೆದ ನಂತರ ಎರಡನೆ ಸಲ ಪಾಕಿಸ್ತಾನ ಪ್ರವಾಸ ಕೈಗೊಂಡಿರುವ ಶ್ರೀಲಂಕಾ ಮೂರು ಟೆಸ್ಟ್ ಮತ್ತು ನಾಲ್ಕು 'ಒಂದು ದಿನ ಅಂತರ ರಾಷ್ಟ್ರೀಯ' ಪಂದ್ಯಗಳನ್ನು ಆಡಲಿದೆ. ಪ್ರವಾಸದ ಮೊದಲ ಪಂದ್ಯ ಒಂಬತ್ತನೇ ತಾರೀಕಿನಂದು ಆರಂಭವಾಗಲಿದೆ.

ಈ ಹಿಂದೆ 1982ರಲ್ಲಿ ಪಾಕಿಸ್ತಾನ ಪ್ರವಾಸ ಕೈಗೊಂಡ ಶ್ರೀಲಂಕಾ ಕ್ರಿಕೆಟ್ ತಂಡ 0-2 ಟೆಸ್ಟ್ ಪರಾಭವದೊಂದಿಗೆ ಮರಳಿತು.

ಪಾಕಿಸ್ತಾನದ ಕ್ರಿಕೆಟ್ ಮಂಡಳಿಯ ಹೊಸ ಯೋಜನೆಯಂತೆ ಪಟ್ಟಣ ಪಿಚ್‌ಗಳನ್ನು ಅಗೆದು ಹೊಸತಾಗಿ ರಚಿಸಲಾಗಿದೆ. ಹೊಸ ಪಿಚ್‌ಗಳು ವೇಗದ ಬೌಲಿಂಗ್‌ಗೆ ಬೆಂಬಲ ನೀಡಬಹುದೆಂಬ ನಿರೀಕ್ಷೆಯಿದ್ದು, ಇನ್ನೂ ಪರೀಕ್ಷಿಸಿಲ್ಲ.

ಲಾಹೋರ್‌ನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಕ್ರಿಕೆಟ್ ತರಬೇತಿ ಶಿಬಿರದ 50 ಆಟಗಾರರಿಂದ 26 ಮಂದಿಯನ್ನು ಈಗಾಗಲೇ ಆಯ್ಕೆ ಮಾಡಲಾಗಿದೆ. ಅಂತಿಮ ಎಂಟ ಆಯ್ಕೆ ಯಾಗಿಲ್ಲ. ಜಾವೇದ್ ಮಿಯಾಂದಾದ್ ಶ್ರೀಲಂಕಾ ವಿರುದ್ಧ ಆಡಲಿರುವ ಪಾಕ್ ತಂಡದ ನಾಯಕರಾಗಿರುವರು.

ಅಮೆರಿಕಕ್ಕೆ ಪುರುಷರ ಟೀಂ ಚಾಂಪ್ಯನ್‌ಶಿಪ್

ಕ್ಯಾನ್‌ಬೆರಾ, ಅ. 6:- ಪ್ರಬಲ ಪ್ರತಿಸ್ಪರ್ಧಿ ಪೂರ್ವ ಜರ್ಮನಿ ವಿರುದ್ಧ ಸ್ಪಷ್ಟ ಮುನ್ನಡೆ ಪಡೆದ ಅಮೆರಿಕಾ ತಂಡ ಇಲ್ಲಿಂದು ಮುಕ್ತಾಯಗೊಂಡ ವಿಶ್ವಕಪ್ ಅಥ್ಲೆಟಿಕ್ಸ್ ಕೂಟದಲ್ಲಿ ಪುರುಷರ ವಿಭಾಗದ ಟೀಂ ಚಾಂಪಿಯನ್ ಶಿಪ್ ಗೆದ್ದುಕೊಂಡಿತು.

ಆದರೆ ಮಹಿಳಾ ವಿಭಾಗದಲ್ಲಿ 121 ಪಾಯಿಂಟ್‌ಗಳೊಂದಿಗೆಅಗ್ರಸ್ಥಾನಪಡೆದ ಪೂರ್ವ ಜರ್ಮನಿ ಟೀಂ ಚಾಂಪಿಯನ್ ಶಿಪ್ ಪಡೆಯಿತು. ಜರ್ಮನಿಯ ಈ ಸಾಧನೆಯು ಕಿರೀಟಕ್ಕೆ ಮೆರುಗು ನೀಡುವಂತೆ ಮಹಿಳೆಯರ 400 ಮೀ. ಓಟದಲ್ಲಿ ಮರಿಟಾ ಕೋಚ್ ಅವರು ವಿಶ್ವದಾಖಲೆ ಸ್ಥಾಪಿಸಿದರು.

'ಮಿಂಚಿನ ವೇಗ'ವನ್ನು ಪ್ರದರ್ಶಿಸಿದ ಕೋಚ್ ಕೇವಲ 47.60 ಸೆಕೆಂಡುಗಳಲ್ಲಿ ದೂರವನ್ನು ಕ್ರಮಿಸಿದಾಗ ನೆರೆದಿದ್ದ ಸಹಸ್ರಾರು ಪ್ರೇಕ್ಷಕರು ಹರ್ಷೋದ್ಗಾರಗೈದರು. ಈ ಹಿಂದಿನ ದಾಖಲೆ 1983ರಲ್ಲಿ ಹೆಲ್ಸಿಂಕಿಯಲ್ಲಿ ಝೆಕೊಸ್ಲಾವಾಕಿಯಾದ ಜರ್ಮಿಲಾ ಕ್ರಟೊಚಿವಿಲೊವಾ ಅವರು ಸ್ಥಾಪಿಸಿದ್ದ 47.99 ಸೆಕೆಂಡುಗಳು. ಜರ್ಮಿಲಾ ಅವರು ಈ ಕೂಟದಲ್ಲಿಯೇ ನಿನ್ನೆ ತಾನೆ ತಮ್ಮ ನಿವೃತ್ತಿ ಘೋಷಿಸಿದ್ದಾರೆ.

ಕೊನೆಯ ದಿನವಾದ ಇಂದು ಪೂರ್ವ ಜರ್ಮನಿಯ ಮಹಿಳೆಯರು ಎಲ್ಲರ ಗಮನ ಸೆಳೆದು ವಿಜೃಂಭಿಸಿದರು. ಮಹಿಳೆಯರ 4×100 ಮೀ. ರಿಲೇಯನ್ನು 41.37 ಸೆಕೆಂಡುಗಳಲ್ಲಿ ಕ್ರಮಿಸಿದ ಪೂರ್ವ ಜರ್ಮನಿ ಇನ್ನೊಂದು ವಿಶ್ವದಾಖಲೆ ಸ್ಥಾಪಿಸಿತು. ಈ ಹಿಂದಿನ ದಾಖಲೆಯನ್ನು ಪೂರ್ವ ಜರ್ಮನಿ ತಂಡವೇ ನ್ಯೂಯಾರ್ಕ್ ಕೂಟದಲ್ಲಿ ಸ್ಥಾಪಿಸಿತ್ತು.

ಕೊನೆಯ ದಿನ ದಾಖಲೆಯ ದಿನವಾದಂತೆಯೇ ವಿವಾದದ ದಿನವೂ ಆಯಿತು. ಪುರುಷರ 200 ಮೀ. ಓಟದಲ್ಲಿ 'ಲೈನ್' ಅನ್ನು ದಾಟಿದ ಅಮೆರಿಕಾದ ಕಿರ್ಕ್ ಬಾಪ್ಟಿಸ್ಟ್‌ರನ್ನು ಸ್ಪರ್ಧೆಯಿಂದ 'ಅನರ್ಹ' ಗೊಳಿಸಲಾಯಿತು. ಅದೇ ರೀತಿ ಪುರುಷರ 4×100 ಮೀ. ರಿಲೇಯಲ್ಲಿ 'ರಿಲೇ ಬಾಟನ್' ಅನ್ನು ಕೆಳಕ್ಕೆ ಹಾಕಿದ್ದಕ್ಕಾಗಿ ಆಫ್ರಿಕಾ ತಂಡವನ್ನೂ ಸ್ಪರ್ಧೆಯಿಂದ ಅನರ್ಹಗೊಳಿಸಲಾಯಿತು. ಈ ಸಂಬಂಧ ಸ್ವಲ್ಪ ಕಾಲ 'ವಾಗ್ವಾದ' ನಡೆಯಿತು.

ವಿಶ್ವದಾಖಲೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಕೋಚ್, 'ನಾನು ಸಾಧಿಸಿದ ಸಮಯದಿಂದ ತುಂಬಾ ಸಂತೋಷವಾಗಿದೆ. ಕೊನೆಯ 100 ಮೀಟರನ್ನು ಮೊದಲಿನ ವೇಗದಲ್ಲೇ ನಾನು ಮುಗಿಸಿದ್ದರಿಂದ ಇದು ಸಾಧ್ಯವಾಯಿತು' ಎಂದರು.

ಮಧ್ಯಾಹ್ನ ನಂತರ ಎಲ್ಲ ಪಂದ್ಯಗಳಲ್ಲೂ ವಿಜೃಂಭಿಸಿದ ಪೂರ್ವ ಜರ್ಮನಿ ಮಹಿಳೆಯರು ನಾಲ್ಕು ಸ್ವರ್ಣಗಳನ್ನು ಬಗಲಿಗೆ ಹಾಕಿಕೊಂಡರು.

1979ರ ಮಾಂಟ್ರಿಯಲ್ ಕೂಟದ ನಂತರ ಅಮೆರಿಕಾ ಎರಡನೆ ಬಾರಿಗೆ ಪುರುಷರ ಟೀಂ ಚಾಂಪಿಯನ್‌ಶಿಪ್ ಗೆದ್ದುಕೊಂಡಿತು. 123 ಪಾಯಿಂಟ್ ಗಳಿಸಿದ ಅಮೆರಿಕಾ ನಂತರದ ಸ್ಥಾನ ಪೂರ್ವ ಜರ್ಮನಿ (113) ಪಡೆಯಿತು.

ಕೋಚ್ - ವಿಶ್ವದಾಖಲೆ

111 ಪಾಯಿಂಟ್ ಗಳಿಸಿದ ರಷ್ಯಾ ಮೂರನೆ ಸ್ಥಾನ ಪಡೆದರೆ, ಯುರೋಪ್ (96.5) ಆಫ್ರಿಕಾ (88) ಅಮೆರಿಕಾಸ್ (80) ಓಸಿಯಾನ (64) ಅನುಕ್ರಮವಾಗಿ ನಂತರದ ಸ್ಥಾನ ಪಡೆಯಿತು. ಕೇವಲ 39.5 ಪಾಯಿಂಟ್ ಸೇರಿಸಿದ ಏಷ್ಯಾ ಕೊನೆಗೆ ಉಳಿಯಿತು.

ಮಹಿಳಾ ಟೀಮ್ ಚಾಂಪಿಯನ್ ಶಿಪ್ 121 ಪಾಯಿಂಟ್ ಸೇರಿಸಿದ ಪೂರ್ವ ಜರ್ಮನಿ ಪಾಲಿಗಾದರೆ, 105.5 ಪಾಯಿಂಟ್ ಸೇರಿಸಿದ ರಷ್ಯಾ ಎರಡನೇ ಸ್ಥಾನ ಗಳಿಸಿತು. 86ಪಾಯಿಂಟ್ ಪಡೆದ ಯುರೋಪ್ ಮೂರನೇ ಸ್ಥಾನ ಪಡೆಯಿತು.

ಅಮೆರಿಕಾಸ್ (62.5) ಅಮೆರಿಕಾ ಖಂಡ (61) ಓಸಿಯಾನಾ (52) ಏಷ್ಯಾ (42) ಮತ್ತು ಆಫ್ರಿಕಾ (41) ಅನುಕ್ರಮವಾಗಿ ನಂತರದ ಸ್ಥಾನಗಳಿಸಿದವು.

ಮಂಗಳೂರಿನ ಕರಾವಳಿ ಆಟೊಮೊಟಿವ್ ಸ್ಪೋರ್ಟ್ಸ್ ಕ್ಲಬ್ ಆಶ್ರಯದಲ್ಲಿ ಮಂಗಳೂರಿನ ಕದ್ರಿಹಿಲ್ಸ್‌ನಲ್ಲಿ ಇಂದು ನಡೆದ ದ್ವಿಚಕ್ರ ವಾಹನ ಸ್ಪರ್ಧೆಯ ದೃಶ್ಯಗಳು - ಚಿತ್ರ: ಕೇಶವ ವಿಟ್ಲ



ಅಕ್ಟೋಬರ್‌ನಲ್ಲಿ ರಾಜಸ್ಥಾನದ ಜೈಪುರದಲ್ಲಿ ನಡೆಯಲಿರುವ ರಾಷ್ಟ್ರೀಯ ಟೆಲಿಕಮ್ಯುನಿಕೇಶನ್ ಪವರ್‌ಲಿಫ್ಟಿಂಗ್ ಹಾಗೂ ದೇಹದಾರ್ಢ್ಯ ಸ್ಪರ್ಧೆಯಲ್ಲಿ ಭಾಗವಹಿಸಲಿರುವ ರಾಜ್ಯ ತಂಡಕ್ಕೆ ಆಯ್ಕೆಯಾಗಿರುವ ಬೆಂಗಳೂರು ತಂತಿವಿಭಾಗದ ಪ್ರೇಮನಾಥ ಉಳ್ಳಾಲ್ ಹಾಗೂ ಮಂಗಳೂರು ಟೆಲಿಫೋನ್ಸ್ ವಿಭಾಗದ ನಾಗೇಶ ಶೆಟ್ಟಿ ಇಬ್ಬರೂ ಬಾಲಂಜನೇಯ ಜಿಮ್ನಾಶಿಯಂ ಸದಸ್ಯರು.

ಕರ್ನಾಟಕ, ತಮಿಳ್ನಾಡು ಕ್ರಿಕೆಟ್ ಫೈನಲಿಗೆ

ಹೈದರಾಬಾದ್, ಅ. 6–ಪಾಲಿ ಚಾಂಪಿಯನ್ ತಮಿಳುನಾಡು ಹಾಗೂ ಕರ್ನಾಟಕಗಳು ಪಟ್ಟಾಭಿರಾಮ ಟ್ರೋಫಿ ದಕ್ಷಿಣ ವಲಯ 15 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯ ಫೈನಲ್ ಪ್ರವೇಶಿಸಿದೆ.

ಇಲ್ಲಿ ನಡೆದ ಸೆಮಿಫೈನಲ್ ಪಂದ್ಯಗಳಲ್ಲಿ ತಮಿಳುನಾಡು ತಂಡ ಕೇರಳದ ವಿರುದ್ಧ ಹಾಗೂ ಕರ್ನಾಟಕ ತಂಡ ಹೈದರಾಬಾದ್ ವಿರುದ್ಧ ಟಾಸ್‌ನಲ್ಲಿ ಜಯಗಳಿಸಿ ಫೈನಲ್‌ಗೆ ರಹದಾರಿ ಪಡೆದವು.

ಮಳೆಯಿಂದಾಗಿ ಎರಡೂ ತಂಡಗಳು ಮೊದಲ ಇನಿಂಗ್ಸ್ ಪೂರ್ಣಗೊಳಿಸಲು ವಿಫಲವಾದವು. ಕೇರಳವನ್ನು 158 ರನ್‌ಗಳಿಗೆ ಆಲೌಟ್ ಮಾಡಿದ ತಮಿಳುನಾಡು ಆಟ ನಿಂತಾಗ 3 ವಿಕೆಟ್‌ಗೆ 122 ರನ್ ಗಳಿಸಿತ್ತು.

ಇನ್ನೊಂದು ಸೆಮಿಫೈನಲ್‌ನಲ್ಲಿ ಹೈದರಾಬಾದ್ ಮೊದಲ ಇನಿಂಗ್ಸ್‌ನಲ್ಲಿ ಎಂಟು ವಿಕೆಟ್‌ಗಳಿಗೆ 154 ರನ್‌ಗಳಿಸಿ ಡಿಕ್ಲೇರ್ ಮಾಡಿಕೊಂಡರೆ, ಉತ್ತರವಾಗಿ ಕರ್ನಾಟಕ ಐದು ವಿಕೆಟ್ ನಷ್ಟಕ್ಕೆ 75 ರನ್ ಗಳಿಸಿತಾದರೂ ಟಾಸ್‌ನಲ್ಲಿ ಜಯಗಳಿಸಿತು.

ಟೂರ್ನಿಯ ಫೈನಲ್ ಪಂದ್ಯ ಅ. ಎಳರಂದು ಇಲ್ಲಿ ನಡೆಯಲಿದ್ದು ತಮಿಳುನಾಡು ಹಾಗೂ ಕರ್ನಾಟಕ ತಂಡಗಳು ಸೆಣಸಲಿವೆ.

ಸಂಕ್ಷಿಪ್ತ ಸ್ಕೋರು: ಕೇರಳ 158, ತಮಿಳುನಾಡು 3ಕ್ಕೆ 122.

ಹೈದರಾಬಾದ್ 8ಕ್ಕೆ 158 ಡಿಕ್ಲೇರ್ಡ್ (ನವೀನ್ ಕುಮಾರ್ 23, ವಿಜಯ್ 47, ವರ್ಮ 24ಕ್ಕೆ 4) ಕರ್ನಾಟಕ 5ಕ್ಕೆ 75 (ರಾಜೇಂದ್ರ 17ಕ್ಕೆ 3)

ಭಾರತ ಟಿ.ಟಿ. ತಂಡ ಯುರೋಪ್‌ಗೆ

ಮುಂಬಯಿ, ಅ. 6 – ರಾಷ್ಟ್ರೀಯ ಚಾಂಪಿಯನ್ ಕಮಲೇಶ್ ಮೆಹ್ತಾ ಅವರ ನಾಯಕತ್ವದ ನಾಲ್ಕು ಸದಸ್ಯರ ಭಾರತ ಟೇಬಲ್ ಟೆನಿಸ್ ತಂಡವೊಂದು 43 ದಿನಗಳ ಯುರೋಪ್ ಪ್ರವಾಸಕ್ಕಾಗಿ ತೆರಳಲಿದೆ.

ಈ ತಂಡವು ಯುಗೋಸ್ಲಾವಿಯಾ, ಪೋಲೆಂಡ್, ಬೆಲ್ಜಿಯಂ ಹಾಗೂ ಹಂಗೇರಿಗಳಲ್ಲಿ ವಿಶ್ವ ಟಿಟಿ ಟೂರ್ನಿಗಳಲ್ಲಿ ಭಾಗವಹಿಸಲಿದೆ.

ತಂಡದ ಉಳಿದ ಸದಸ್ಯರೆಂದರೆ, ಸುಜಯ್ ಘೋರ್ಪಡೆ, ಅರುಣ ಜ್ಯೋತಿ ಬರುವಾ ಮತ್ತು ಮನಮೀತ ಸಿಂಗ್.

ಅ. 9ರಿಂದ ರಾ. ಆಟ್ಯಾ ಪಾಟ್ಯಾ

ಹೊಸದಿಲ್ಲಿ, ಅ. 6– ಮೂರನೇ ರಾಷ್ಟ್ರೀಯ ಆಟ್ಯಾಪಾಟ್ಯಾ ಚಾಂಪಿಯನ್ ಶಿಪ್ ಅ. 9ರಿಂದ 11ರವರೆಗೆ ಇಲ್ಲಿ ನಡೆಯಲಿದೆ ಎಂದು ಭಾರತ ಆಟ್ಯಾ ಪಾಟ್ಯಾ ಒಕ್ಕೂಟದ ಅಧ್ಯಕ್ಷ ಎಂ. ಎ. ದುಬೆ ತಿಳಿಸಿದ್ದಾರೆ.

ಈ ಚಾಂಪಿಯನ್ ಶಿಪ್‌ನಲ್ಲಿ ಕರ್ನಾಟಕ, ಗುಜರಾತ್, ಮಹಾರಾಷ್ಟ್ರ, ದೆಹಲಿ, ಹರ್‍ಯಾನ, ಪಶ್ಚಿಮ ಬಂಗಾಳ, ಆಂಧ್ರ ಪ್ರದೇಶ ಮತ್ತು ಮಧ್ಯ ಪ್ರದೇಶ ತಂಡಗಳು ಭಾಗವಹಿಸಲಿವೆ.

ಕೂಚ್ ಬಿಹಾರಿ ಟ್ರೋಫಿ ಗುಜರಾತ್ 6ಕ್ಕೆ 195

ರಾಜ್‌ಕೋಟ, ಅ. 6– ಗುಜರಾತ್ ಇಲ್ಲಿ ನಡೆಯುತ್ತಿರುವ ಪಶ್ಚಿಮ ವಲಯ ಕೂಚ್ ಬಿಹಾರಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಮೊದಲ ದಿನದ ಕೊನೆಗೆ ಮಹಾರಾಷ್ಟ್ರ ವಿರುದ್ಧ 6 ವಿಕೆಟ್ ನಷ್ಟಕ್ಕೆ 195 ರನ್ ಗಳಿಸಿ ಉತ್ತಮ ಸ್ಥಿತಿಯಲ್ಲಿದೆ.

ಎಸ್. ಕಿಪಾಕೆವಾಲಾ ಅವರು 14 ಬೌಂಡರಿಗಳಿರುವ 83 ರನ್ ಗಳಿಸಿದರೆ, ಮುಕುಂದ ಪರಮಿಂದರ್ ... ಬೌಂಡರಿಗಳ 58ರನ್ ಗಳಿಸಿ ತಂಡದ ಸುಭದ್ರ ಸ್ಥಿತಿಗೆ ಕಾರಣರಾದರು.

ಐ ಎಫ್ ಎ ಶೀಲ್ಡ್‌ಗೆ ಬಾಂಗ್ಲಾ ತಂಡ

ಢಾಕ್ಕಾ, ಅ. 6– ಕಲ್ಕತ್ತದಲ್ಲಿ ನವಂಬರ್ 15ರಿಂದ ಆರಂಭಗೊಳ್ಳುವ ಐ ಎಫ್ ಎ ಶೀಲ್ಡ್ ಫುಟ್‌ಬಾಲ್ ಟೂರ್ನಿಯಲ್ಲಿ ಬಾಂಗ್ಲಾದ ಚಾಂಪಿಯನ್ ಕ್ಲಬ್ ಅಬಹಾನಿ ಕ್ರೀಡಾ ಚಕ್ರ ಪಾಲ್ಗೊಳ್ಳಲಿದೆ.

ಪ್ರತಿಷ್ಠಿತ ಟೂರ್ನಿಯಲ್ಲಿ ಭಾಗವಹಿಸಲು ಆಹ್ವಾನ ಪಡೆದ ಅಬಹಾನಿ ತಂಡ, ಇತ್ತೀಚೆಗೆ ಕೊಲಂಬೊದಲ್ಲಿ ನಡೆದ ಏಷ್ಯಾ ಕ್ಲಬ್ ಚಾಂಪಿಯನ್ ಶಿಪ್‌ನಲ್ಲಿ ಈಸ್ಟ್ ಬೆಂಗಾಲ್ ತಂಡದಿಂದ ಪರಾಭವ ಅನುಭವಿಸಿದ್ದು ಮತ್ತೊಮ್ಮೆ ಇಲ್ಲಿ ಎದುರಿಸಲಿದೆ.

ಬಾಗನ್‌ಗೆ ಗೋಲ್ಡ್ ಕಪ್

ಗ್ಯಾಂಗ್‌ಟಕ್, ಅ. 5– ಪ್ರಬಲ ಎದುರಾಳಿ ಮೊಹಮ್ಮದನ್ ಸ್ಪೋರ್ಟಿಂಗ್ ವಿರುದ್ಧ ಏಕೈಕ ಗೋಲಿನ ಜಯ ಪಡೆದ ಕಲ್ಕತ್ತಾದ ಮೋಹನ್ ಬಾಗನ್ ತಂಡ ಪ್ರತಿಷ್ಠಿತ 7ನೇ ಗವರ್ನರ್ಸ್ ಕಪ್ ಫುಟ್ಬಾಲ್ ಗೋಲ್ಡ್ ಕಪ್ ಅನ್ನು ಕೈಗೆತ್ತಿಕೊಂಡಿತು.

ಅತ್ಯಂತ ತೀವ್ರ ಸ್ಪರ್ಧೆ ಕಂಡ ಪಂದ್ಯದ ಕೊನೆಯ ಸೀಟಿಗೆ 12 ನಿಮಿಷ ಮುನ್ನ ಮಿಹಿರ್ ಬೋಸ್ ಮತ್ತು ಫರೀದ್ ಅವರ ಜಂಟಿ ಯತ್ನದಿಂದ ಪಡೆದ ಚೆಂಡನ್ನು ಸುಬಿರ್ ಸರ್ಕಾರ್ ಗೋಲಾಗಿಸಿದರು.

ಕಳೆದ ವರ್ಷ ಜಂಟಿಯಾಗಿ ಪ್ರಶಸ್ತಿ ಗೆದ್ದಿದ್ದ ಬಾಗನ್ ತಂಡದ ಗೋಲ್‌ಕೀಪರ್ ತನುಮೊಯ್ ಬೋಸ್‌ಗೆ 'ಅತ್ಯುತ್ತಮ ಆಟಗಾರ' ಎಂಬ ಪ್ರಶಸ್ತಿ ದೊರಕಿದೆ.

ಸಿಕ್ಕಿಂ ಮುಖ್ಯಮಂತ್ರಿ ನರಬಹಾದುರ್ ಭಂಡಾರಿ ಬಹುಮಾನ ವಿತರಿಸಿದರು.

ಡೇವಿಸ್: ಪ. ಜರ್ಮನಿ ಸ್ವೀಡನ್ ಫೈನಲಿಗೆ

ಮಾಲ್ಮೊ, ಅ. 6– ಆಸ್ಟ್ರೇಲಿಯಾ ವಿರುದ್ಧ 3–0 ಮುನ್ನಡೆ ಸಾಧಿಸಿದ ಹಾಲಿ ಚಾಂಪಿಯನ್ ಸ್ವೀಡನ್ ಡೇವಿಸ್ ಕಪ್ ಫೈನಲ್ ತಲುಪಿದೆ.

ಮೊದಲ ಸಿಂಗಲ್ಸ್‌ನಲ್ಲಿ ಸ್ವೀಡನ್‌ನ ಆ್ಯಂಡ್ರೂಸ್ ಜೆರಿಡ್ ಅವರು ಪೀಟರ್ ಮೆಕ್‌ಮಾರಾರನ್ನು 6-4, 6–4, 7–6, ರಿಂದ ಹಿಮ್ಮೆಟ್ಟಿಸಿದರೆ, ಎರಡನೆ ಸಿಂಗಲ್ಸ್‌ನಲ್ಲಿ ಮ್ಯಾಟ್ಸ್ ವಿಲಾಂಡರ್ ಅವರು ವಾಲ್ಲೀ ಮಸೂರ್‌ರನ್ನು 6–1, 6–1, 6–0 ನೇರ ಸೆಟ್‌ಗಳಿಂದ ಪರಾಭವಗೊಳಿಸಿ ತಂಡಕ್ಕೆ 2–0 ಮುನ್ನಡೆಯ ಭದ್ರಬುನಾದಿ ಹಾಕಿದರು.

ನಿರ್ಣಾಯಕ ಮೂರನೆ ಪಂದ್ಯದಲ್ಲಿ ಸ್ವೀಡನ್‌ನ ಖ್ಯಾತ ಡಬಲ್ಸ್ ಜೋಡಿ ಜೆರಿಡ್ ಮತ್ತು ಸ್ಟೀಫನ್ ಎಡ್‌ಬರ್ಗ್ ಅವರು ಜಾನ್ ಫಿಟ್ಜೆರಾಲ್ಡ್ ಮತ್ತು ಎಡ್ಮಂಡ್‌ಸನ್ ಜೋಡಿ ವಿರುದ್ಧ 6–4, 6–3, 6–4 ಸೆಟ್‌ಗಳ ಜಯಪಡೆದು ತಂಡದ ಫೈನಲ್ ಪ್ರವೇಶವನ್ನು ಖಚಿತಗೊಳಿಸಿದರು.

ಪ. ಜರ್ಮನಿ ಫೈನಲಿಗೆ

ಇನ್ನೊಂದು ಸೆಮಿಫೈನಲ್‌ನಲ್ಲಿ ಝೆಕೊಸ್ಲಾವಾಕಿಯಾ ತಂಡದ ವಿರುದ್ಧ 3–0 ಮುನ್ನಡೆ ಪಡೆದ ಪ. ಜರ್ಮನಿ ಫೈನಲ್ ತಲುಪಿದೆ.

ಮೊದಲ ಸಿಂಗಲ್ಸ್‌ನಲ್ಲಿ ಪ. ಜರ್ಮನಿಯ ವಿಂಬಲ್ಡನ್ ವೀರ ಬೋರಿಸ್ ಬೆಕರ್, ಮಿಲೊಸ್ಲಾವ್ ಮೆಸಿಕ್ ವಿರುದ್ಧ 6.3, 7–5, 6–4 ಸೆಟ್‌ಗಳ ಜಯ ಅನುಭವಿಸಿದರು.

ಇನ್ನೊಂದು ಕುತೂಹಲಕಾರಿ ಸಿಂಗಲ್ಸ್‌ನಲ್ಲಿ 86 ಗೇಮ್‌ಗಳ ದಾಖಲೆ ಹೋರಾಟದ ನಂತರ ಥಾಮಸ್ ಸ್ಮಿಡ್ ವಿರುದ್ಧ ಜಯ ಪಡೆದ ವೆಸ್ಟ್‌ಫಾಲ್ ಪ. ಜರ್ಮನಿಗೆ 2–0 ಮುನ್ನಡೆ ದೊರಕಿಸಿದರು.

ಹತ್ತು ಸಾವಿರಕ್ಕೂ ಮೀರಿದ ಪ್ರೇಕ್ಷಕರೆದುರು ಐದೂವರೆ ಗಂಟೆಗಳ ಸುದೀರ್ಘ ಹೋರಾಟ ನಡೆಸಿದ ವೆಸ್ಟ್‌ಫಾಲ್ ಕೊನೆಗೂ 6–8, 1-6 7–5, 11-9, 17-15ರಿಂದ ಜಯಸಿ ಅಚ್ಚರಿ ಹುಟ್ಟಿಸಿದರು.

ಬೋರಿಸ್ ಬೆಕರ್ ಮತ್ತು ಆ್ಯಂಡ್ರೂಸ್ ಮಾರಿಯರ್ ಅವರ ಡಬಲ್ಸ್ ಜೋಡಿ ಇವಾನ್ ಲೆಂಡ್ಲ್ ಮತ್ತು ಥಾಮಸ್ ಸ್ಮಿಡ್‌ರನ್ನು 6-1, 7-5, 6-4 ರಿಂದ ಮಣಿಸಿ 3–0 ಮುನ್ನಡೆಯೊಂದಿಗೆ ಫೈನಲ್ ಪ್ರವೇಶವನ್ನು ಘೋಷಿಸಿದರು.

ಪರ್ಮಿಂದರ್ ಸಿಂಗ್, ಆಶಾಗೆ ಪ್ರಶಸ್ತಿ

ಹೊಸದಿಲ್ಲಿ, ಅ. 6–ಫುಟ್‌ಬಾಲ್ ಪಟು ಪರ್ಮಿಂದರ್ ಸಿಂಗ್ ಮತ್ತು ಮ್ಯಾರಥಾನ್ ಓಟಗಾರ್ತಿ ಆಶಾ ಅಗರ್ವಾಲ್ ಅವರು 1984ರ 'ಶ್ರೇಷ್ಠ ಕ್ರೀಡಾಪಟು'ಗಳಾಗಿ 'ದಿಲ್ಲಿ ಕ್ರೀಡಾಪತ್ರಕರ್ತರ ಸಂಘದ ಪ್ರಶಸ್ತಿ'ಗೆದ್ದುಕೊಂಡಿದ್ದಾರೆ.

ನಿನ್ನೆ ಇಲ್ಲಿ ನಡೆದ ಪತ್ರಕರ್ತರ ಸಂಘದ ವಾರ್ಷಿಕ ಬಹುಮಾನ ವಿತರಣಾ ಸಮಾರಂಭದಲ್ಲಿ ಈ ಬಹುಮಾನ ವಿತರಿಸಲಾಯಿತು. ಜತೆಗೇ 1983ರ ಶ್ರೇಷ್ಠ ಕ್ರೀಡಾಪಟುಗಳಾದ ಮೊಹಿಂದರ್ ಅಮರನಾಥ್ ಹಾಗೂ 'ಸ್ಕ್ವಾಷ್ ರಾಣಿ' ಭುವನೇಶ್ವರಿ ಕುಮಾರಿ ಅವರಿಗೂ ಪ್ರಶಸ್ತಿ ನೀಡಲಾಯಿತು.

ಕರ್ನಾಟಕ ಕ್ವಾ. ಫೈನಲಿಗೆ

ಚಂಡೀಗಢ, ಅ. 6– ಇಲ್ಲಿ ನಡೆಯುತ್ತಿರುವ 12ನೇ ರಾಷ್ಟ್ರೀಯ ಜೂನಿಯರ್ ವಾಲಿಬಾಲ್ ಚಾಂಪಿಯನ್ ಶಿಪ್‌ನಲ್ಲಿ ಕರ್ನಾಟಕ ಬಾಲಕರ ತಂಡ ಕ್ವಾರ್ಟರ್ ಫೈನಲ್ ಪ್ರವೇಶಿಸಿದೆ.

'ಸಿ' ಗುಂಪಿನಲ್ಲಿ ಕರ್ನಾಟಕ ಒಟ್ಟು ಮೂರು ಜಯದೊಂದಿಗೆ ಕ್ವಾರ್ಟರ್ ಫೈನಲ್ ಪ್ರವೇಶಿಸಿದೆ. ಎರಡು ಜಯಗಳಿಸಿರುವ ಪಂಜಾಬ್ ಮತ್ತು ಹರ್‍ಯಾನ ತಂಡಗಳು ಕ್ವಾರ್ಟರ್ ಫೈನಲ್ ಪ್ರವೇಶಕ್ಕಾಗಿ ಹೋರಾಡಲಿದೆ.

ಕರ್ನಾಟಕ ಮೇಲುಗೈ

ಮದರಾಸು, ಅ. 6 – ಇಲ್ಲಿ ನಡೆಯುತ್ತಿರುವ 19ರ ಕೆಳಗಿನ ಹರೆಯದವರ ಗುಲಾಂ ಅಹ್ಮದ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಕರ್ನಾಟಕವು ಗೋವಾ ವಿರುದ್ಧ ಸ್ಪಷ್ಟ ಮೇಲುಗೈ ಪಡೆದಿದೆ. ಪಂದ್ಯದ ಎರಡನೆ ದಿನವಾದ ಇಂದು ಕರ್ನಾಟಕ ತನ್ನ ಮೊದಲ ಇನಿಂಗ್ಸನ್ನು 9ಕ್ಕೆ 258 ರನ್‌ಗೆ ಡಿಕ್ಲೇರ್ಡ್ ಮಾಡಿದ್ದು, ಕೇವಲ 74 ರನ್‌ಗಳಿಗೆ ಗೋವಾದ ಆರು ವಿಕೆಟ್ ಕಬಳಿಸಿದೆ.

ವಿವೇಕ್ ಬೇಕಲ್ (ಅಜೇಯ 28) ಮತ್ತು ಕಾರ್ತಿಕ್ (ಅಜೇಯ 21) ನಡುವಣ ಮುರಿಯದ 62 ರನ್ ಜತೆಯಾಟ ಕರ್ನಾಟಕ ತಂಡದ ಪ್ರಮುಖ ಅಂಶವಾಗಿತ್ತು.

ಇನ್ನೊಂದು ಪಂದ್ಯದಲ್ಲಿ ಸೈಯದ್ ಶಹಿದ್‌ರ 75 ರನ್ ನೆರವಿಂದ ಕೇರಳ ಎರಡನೆ ಇನಿಂಗ್ಸ್‌ನಲ್ಲಿ 6ಕ್ಕೆ 169 ರನ್ ಸೇರಿಸಿದೆ. ಕೇರಳ ಮೊದಲ ಇನಿಂಗ್ಸ್ ಸ್ಕೋರ್ 118ಕ್ಕೆ ಉತ್ತರವಾಗಿ ಆಂಧ್ರ ಮೊದಲ ಇನಿಂಗ್ಸ್‌ನಲ್ಲಿ 142 ರನ್ ಗಳಿಸಿತ್ತು.

ಇಂದಿರಾ ಹಾಕಿಗೆ ಭಾರತದ 2 ತಂಡ

ಹೊಸದಿಲ್ಲಿ, ಅ. 6- ನ್ಯಾಷನಲ್ ಸ್ಟೇಡಿಯಂನಲ್ಲಿ ನವೆಂಬರ್ 12ರಿಂದ ಆರಂಭವಾಗಲಿರುವ ಇಂದಿರಾ ಗಾಂಧಿ ಗೋಲ್ಡ್ ಕಪ್ ಅಂತರ ರಾಷ್ಟ್ರೀಯ ಮಹಿಳಾ ಹಾಕಿ ಟೂರ್ನಿಯಲ್ಲಿ ಭಾರತದ ಎರಡು ತಂಡಗಳು ಭಾಗವಹಿಸಲಿವೆ.

ಈ ವಿಷಯವನ್ನು ಸುದ್ದಿಗಾರರಿಗೆ ತಿಳಿಸಿದ ಅಖಿಲ ಭಾರತ ಮಹಿಳಾ ಹಾಕಿ ಅಸೋಸಿಯೇಶನ್ ಕಾರ್ಯದರ್ಶಿ ಶ್ರೀಮತಿ ಅಮೃತಾ ಬೋಸ್, ಒಂದು ಸೀನಿಯರ್ ತಂಡ ಹಾಗೂ ಇನ್ನೊಂದು ಉದಯೋನ್ಮುಖ ಎಳೆಯ ಆಟಗಾರರ ತಂಡವನ್ನು ಆಯ್ಕೆ ಮಾಡಲಾಗುವುದು ಎಂದರು.

ಅಕ್ಟೋಬರ್ 13ರಿಂದ ನ್ಯಾಷನಲ್ ಸ್ಟೇಡಿಯಂನಲ್ಲಿ ಎರಡನೇ ತರಬೇತಿ ಶಿಬಿರ ಆರಂಭವಾಗಲಿದ್ದು 36 ಮಂದಿ ಮಹಿಳೆಯರು ಶಿಬಿರದಲ್ಲಿ ಭಾಗವಹಿಸಲಿದ್ದಾರೆ.

ಸೆಪ್ಟಂಬರ್ 29ರಂದು ಮುಕ್ತಾಯಗೊಂಡ ಮೊದಲ ಶಿಬಿರದಲ್ಲಿ ಭಾಗವಹಿಸಿದ ಮೂವರನ್ನು ಅನಾರೋಗ್ಯದ ಕಾರಣಗಳಿಂದಾಗಿ ತಂಡದಿಂದ ಕೈ ಬಿಡಲಾಗಿದೆಯೆಂದ ಬೋಸ್, ಬೇರೆ ಮೂವರನ್ನು ಎರಡನೇ ಶಿಬಿರಕ್ಕೆ ಆಯ್ಕೆ ಮಾಡಲಾಗಿದೆ ಎಂದರು.

ವಿಶ್ವ ಚೆಸ್ ಪಂದ್ಯ ಮುಂದೂಡಿಕೆ

ಮಾಸ್ಕೋ, ಅ. 6–ವಿಶ್ವ ಚಾಂಪಿಯನ್ ಅನಾತೊಲಿ ಕಾರ್ಪೋವ್ ಹಾಗೂ ಗ್ಯಾರಿ ಕಾಸ್ಪರೋವ್ ನಡುವಣ ವಿಶ್ವ ಚೆಸ್ ಮರುಹೋರಾಟದ 13ನೇ ಪಂದ್ಯವನ್ನು ಮಂಗಳವಾರಕ್ಕೆ ಮುಂದೂಡಲಾಗಿದೆ.

ಕಾರ್ಪೋವ್ ಅವರು ಎರಡನೇ ವಿರಾಮವನ್ನು ಕೇಳಿದ್ದು, ಇದರಿಂದ ಇನ್ನು ಒಂದು ವಿರಾಮವಷ್ಟೇ ಉಳಿದಿದೆ. ಇದುವರೆಗಿನ 12 ಪಂದ್ಯಗಳಲ್ಲಿ ಇಬ್ಬರೂ 6 ಪಾಯಿಂಟ್ ಗಳನ್ನು ಗಳಿಸಿ ಸಮಬಲದಲ್ಲಿದ್ದಾರೆ.

ಮೊದಲು ಆರು ಪಂದ್ಯವನ್ನು ಗೆಲ್ಲುವ ಆಟಗಾರನು ಪ್ರಶಸ್ತಿಯನ್ನು ಪಡೆಯಲು ಅರ್ಹನಾಗುತ್ತಾನೆ.

ಅಭಿನಂದನೆಗಳು

ಶ್ರೀ ಶಶಿಕಾಂತ ಶೆಟ್ಟಿ, ಉಡುಪಿ ಲಾ ಕಾಲೇಜು.

ಮಂಗಳೂರು ವಿ.ವಿ. ಸರ್ವ ಕಾಲೇಜು ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿ ಚುನಾಯಿತರಾದ ನಿಮಗೆ ನಮ್ಮ ಹಾರ್ದಿಕ ಅಭಿನಂದನೆಗಳು.

ಎಚ್. ರಾಜೀವ ಶೆಟ್ಟಿ ಅಂತಿಮ ಲಾ
ಕಿಶೋರ್ ಕುಮಾರ್ ಶೆಟ್ಟಿ „
ಪ್ರಕಾಶ್ ಶೆಟ್ಟಿ ಉಡುಪಿಕಾರ್ „
ಉದಯ ನಾರಾಯಣ್ „
ಪ್ರದೀಪ್ ಸದಾನಂದ ರಾವ್ „

ತರಬೇತಿ ಶಿಬಿರದ ಬಗ್ಗೆ ಘೋಷ್ ಮೆಚ್ಚುಗೆ

ಮದರಾಸು, ಅ. 6–ಮುಂದಿನ ವರ್ಷದ ಜ. 17ರಿಂದ ಆರಂಭಗೊಳ್ಳುವ ಜವಾಹರ ಲಾಲ್ ನೆಹರು ಅಂತರರಾಷ್ಟ್ರೀಯ ಸ್ವರ್ಣ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಭಾಗವಹಿಸುವ ಭಾರತ ತಂಡದ ತಯಾರಿಗಾಗಿ ಈಗ ಮದರಾಸಿನಲ್ಲಿ ನಡೆದಿರುವ ತರಬೇತಿ ಶಿಬಿರದ ಬಗ್ಗೆ ಭಾರತ ಫುಟ್‌ಬಾಲ್ ಫೆಡರೇಷನ್‌ನ ಗೌರವ ಕಾರ್ಯದರ್ಶಿ ಅಶೋಕ್ ಘೋಷ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದ ಘೋಷ್, ಮದರಾಸಿನಲ್ಲಿ ನಡೆಯುತ್ತಿರುವ ಶಿಬಿರದಂತೆ ದಿಲ್ಲಿ ಮತ್ತು ಕಲ್ಕತ್ತಗಳಲ್ಲೂ ಶಿಬಿರಗಳು ನಡೆಯುತ್ತಿದ್ದು ಅದರಿಂದ ತಾವು ಪ್ರಭಾವಿತರಾಗಿರುವುದಾಗಿ ತಿಳಿಸಿದರು.

ಈಗ ಸದ್ಯ ಈ ತರಬೇತಿ ಶಿಬಿರದಲ್ಲಿ 29ಮಂದಿ ಆಟಗಾರರಿದ್ದು ಶಿಬಿರದ ಕೊನೆಗೆ ಈ ಸಂಖ್ಯೆಯನ್ನು 23ಕ್ಕೆ ಇಳಿಸಲಾಗುವುದೆಂದವರು ಹೇಳಿದರು.

ಆಟಗಾರರ ಅಂತಿಮ ಪಟ್ಟಿಯನ್ನು ನವಂಬರ್ ತಿಂಗಳ 11ರಿಂದ ಕಲ್ಲಿಕೋಟೆಯಲ್ಲಿ ನಡೆಯುವ ಅಂತರ ಶಿಬಿರ ಟೂರ್ನಿಯನ್ನು ಕೊನೆಯಲ್ಲಿ ಪ್ರಕಟಿಸಲಾಗುವುದು. ಈ ಟೂರ್ನಿಯಲ್ಲಿ ಕೇರಳ, ಗೋವಾ ಮತ್ತು ಆಂಧ್ರ ಪ್ರದೇಶಗಳ ರಾಜ್ಯ ತಂಡಗಳೂ ಪಾಲ್ಗೊಳ್ಳಲಿವೆ ಎಂದು ಅವರು ತಿಳಿಸಿದರು.

ಈ ಟೂರ್ನಿಯ ಕೊನೆಯಲ್ಲಿ ಆರಿಸಲಾಗುವ 25 ಆಟಗಾರರಿಗೆ ದಿಲ್ಲಿಯಲ್ಲಿ ಅಂತಿಮ ತರಬೇತಿ ನೀಡಲಾಗುವುದು. ಜವಾಹರ ಲಾಲ್ ನೆಹರೂ ಟೂರ್ನಿಗೆ ಅಂತಿಮ ಭಾರತೀಯ ತಂಡವನ್ನು ಡಿಸೆಂಬರ್ ಕೊನೆಯ ವೇಳೆಗೆ ಅಥವಾ ಜನವರಿ ತಿಂಗಳಲ್ಲಿ ಪ್ರಕಟಿಸಲಾಗುವುದೆಂದು ಘೋಷ್ ತಿಳಿಸಿದರು.

ಗ್ರಾಮೀಣ ಕ್ರೀಡಾಕೂಟ ಕೊಡಗು ಮೇಲುಗೈ

ಶಿವಮೊಗ್ಗ, ಅ. 6– ಇಲ್ಲಿ ನಿನ್ನೆ ಆರಂಭಗೊಂಡ ಎರಡು ದಿನಗಳ ರಾಜ್ಯ ಮಟ್ಟದ ಗ್ರಾಮೀಣ ಕ್ರೀಡಾಕೂಟದಲ್ಲಿ ಕೊಡಗಿನ ಬಾಲಕಿಯರು ಅಥ್ಲೆಟಿಕ್ ವಿಭಾಗದಲ್ಲಿ ಮೇಲುಗೈ ಪಡೆದರು. ಹೈಜಂಪ್ ಸ್ಪರ್ಧೆಯೊಂದನ್ನುಳಿದು ಇತರೆಲ್ಲಾ ಸ್ಪರ್ಧೆಗಳಲ್ಲಿಯೂ ಕೊಡಗಿನ ಬಾಲಕಿಯರು ಮೊದಲ ಸ್ಥಾನ ಪಡೆದರು.

ಮೊದಲ ದಿನ ನಡೆದ ಅಥ್ಲೆಟಿಕ್ ಸ್ಪರ್ಧೆಗಳ ಫಲಿತಾಂಶಗಳು ಕೆಳ ಕಂಡಂತಿವೆ.

ಬಾಲಕರು:

100 ಮೀ: 1. ಸುನಿಲ್ (ರಾಯಚೂರು) 2. ಕೃಷ್ಣ ಪ್ರಸಾದ್ ಹೆಗ್ಡೆ (ದ. ಕನ್ನಡ) 3. ಎನ್. ಎಸ್. ಸಿದ್ದಿ (ಬೆಳಗಾಂ)

400 ಮೀ: 1. ಕೆ. ಎಲ್. ಮಹಮ್ಮದ್ ಪೂರ್ (ಬೆಳಗಾಂ) 2. ತಿಲಕನ್ (ಹಾಸನ) 3. ಎಸ್. ಸಿ. ಕೆಂಚಣ್ಣವರ್ (ಧಾರವಾಡ)

1500 ಮೀ: 1. ಮಲ್ಲಯ್ಯ (ತುಮಕೂರು) 2. ರವಿ ಕುಮಾರ್ (ಶಿವಮೊಗ್ಗ) 3. ವಿಜಯ ಕುಮಾರ್ (ಶಿವಮೊಗ್ಗ)

ಹೈಜಂಪ್: ಅಶೋಕ ಕುಮಾರ್ (ರಾಯಚೂರು) 2. ವಿನ್ಸೆಂಟ್ ಡಿ'ಸೋಜಾ (ದ.ಕ.), ನಾರಾಯಣ ಸ್ವಾಮಿ (ಬೆಂಗಳೂರು), ರವಿರಾಜ್ (ದ. ಕ.)

ಶಾಟ್‌ಪುಟ್: 1. ಮಹಮ್ಮದ್ ಜಕೀರ್ (ರಾಯಚೂರು), 2. ಸುನಿಲ್ 3. ಶಿವ ಕುಮಾರ್ (ಬೆಂಗಳೂರು)

ಬಾಲಕಿಯರು:

100 ಮೀ: 1. ಸಿಲ್ವಿಯಾ ಪಾಯಸ್ (ಕೊಡಗು), 2. ಎಚ್. ಜಿ. ಅಪ್ಸರಾ 3. ಮಾಲತಿ (ರಾಯಚೂರು)

800 ಮೀ: 1. ಲವೀನಾ ಲೋಬೊ (ಕೊಡಗು), 2. ಸರಿತಾ ಶೆಟ್ಟಿ (ದ. ಕ.) 3. ಎಂ. ಎಂ. ವಿಲಿನಾ (ಕೊಡಗು)

ಲಾಂಗ್‌ಜಂಪ್: 1. ಪಿ. ಎಸ್. ತಂಗಮ್ಮ (ಕೊಡಗು) 2. ಮಾಲತಿ (ರಾಯಚೂರು) 3. ರೀನಾ ಸಿಕ್ವೇರಾ (ದ. ಕ.)

ಹೈಜಂಪ್: 1. ಎಂ. ಎಂ. ಪುಷ್ಪ (ಬೆಂಗಳೂರು) 2. ಯು. ಅನಂದಾ ರಾವ್ (ದ.ಕ.) 3. ಕೆ. ಪಿ. ಸವಿತಾ (ಕೊಡಗು)

ಜಾವೆಲಿನ್ ಥ್ರೋ: 1. ಭಾಗೀರಥಿ (ಕೊಡಗು) 2. ಜಯಶ್ರೀ ಹೆಗಡೆ(ದ.ಕ) 3. ಎಂ. ಸಿ. ನಯನಾ (ಕೊಡಗು).

ಚಂದ್ರಶೇಖರ್‌ಗೆ ಧನ ಸಹಾಯ

ರಾಬ್ಲಂ, ಅ. 6–ಅನಾರೋಗ್ಯದಿಂದ ಬಳಲುತ್ತಿರುವ ಟಿಟಿ ತಾರೆ ತಮಿಳುನಾಡಿನ ವಿ. ಚಂದ್ರಶೇಖರ ಅವರ ವೈದಕೀಯ ಸಹಾಯಕ್ಕಾಗಿ ಕೇಂದ್ರ ಸಚಿವ ಮಾಧವ ರಾವ್ ಸಿಂಧಿಯಾ ಅವರು ವೈಯಕ್ತಿಕ ಕಾಣಿಕೆಯಾಗಿ 10ಸಾವಿರ ರೂ. ಗಳನ್ನು ನೀಡಿದ್ದಾರೆ.

SWITCH ON TO

PRAKASH PRAKASH PRAKASH

SWITCHES WITH PURE SILVER CONTACTS

Before you buy a switch, stop & Consider what you are getting for your money. Not only should you think of the product & the Brand but also the material used to. CONSIDER PRAKASH

Prakash switches are made from the best grade Urea-Formaledehyde, Pure Silver Contacts, Full Brass Movements, Special Quality Springs & Heavy Brass Terminals are used to give you long lasting trouble free service.

Prakash Switches are manufactured on the latest machines with the up-to-date technical know-how with Total Quality Control (TQC) at every stage of production.

Prakash Products are known for the Quality, Craftsmanship & reputed for performance.

It is no wonder that Prakash Electrical Accessories are superior in every way. Elegant & very very long lasting.

Think about all this and remember PRAKASH.

PRA-1-84

SARIGAM

PRAKASH

MFRS M/S PRAKASH BAKELITE & PLASTICS
AMBALAPADY, UDUPI-576 103. PHONE: 8141

'MUNGARU' Kannada Daily Edited, Printed and Published by V. Raghurama Shetty for Mungaru Prakashana Limited, at 124-B Baikampady Industrial Area, Mangalore-575 011. Phones: 7795 and 28703

ಅರ್ಥದಾರಿಕೆಯ 'ಭೀಷ್ಮ'
ದಿ| ಕಿಲ್ಲೆ ನಾರಾಯಣ ಶೆಟ್ಟರು

"ಅಂದೊಬ್ಬ ಕಿಲ್ಲೆ, ಇಂದೊಬ್ಬ ಶೇಣಿ" ಯಕ್ಷಗಾನದ ಅರ್ಥದಾರಿಕೆಯಲ್ಲಿ ಭೀಷ್ಮ-ದ್ರೋಣರೆನಿಸಿದ ಅಂದಿನ ಕಿಲ್ಲೆ ಮತ್ತು ಇಂದಿನ ಶೇಣಿ ಇಬ್ಬರನ್ನು ಕಂಡವರು ಹೀಗೆಂದು ಉದ್ಗರಿಸುತ್ತಾರೆ.

ರಾಮಾಯಣದ 'ವಾಲಿ'ಯ ಭೂಮಿಕೆಯಲ್ಲಿ ಶೇಣಿ ಗೋಪಾಲಕೃಷ್ಣ ಭಟ್ಟರು ಎದುರಾಳಿಯ ಅರ್ಧ ಸತ್ವವನ್ನೇ ಸೆಳೆಯುತ್ತಾರೆ. (ವಾಲಿಗೆ ಎದುರಾಳಿಯ ಅರ್ಧ ಸತ್ವವನ್ನು ಸೆಳೆಯುವ ಶಕ್ತಿ ಇತ್ತಂತೆ). ಕರ್ಣನ ಭೂಮಿಕೆಯಲ್ಲಿ ಕಿಲ್ಲೆಯವರು ಎದುರಾಳಿಯ ಮುಕುಟವನ್ನೇ ಹಾರಿಸುತ್ತಿದ್ದರು.

"ಕರ್ಣನೆಂದರೆ ಕಿಲ್ಲೆ, ಕಿಲ್ಲೆಯೆಂದರೆ ಕರ್ಣ" ಎಂಬ ರೀತಿಯಲ್ಲಿ ಕರ್ಣ-ಕಿಲ್ಲೆಯರ ನಡುವೆ ಅಭೇದ್ಯವಾದ ಕಲ್ಪನೆಯೇ ಜನರಲ್ಲಿ ಮನೆ ಮಾಡಿಕೊಂಡಿತ್ತು. 'ನೆನೆಯ ದಿರಣ್ಣ, ಯಕ್ಷಗಾನದೊಳ್ ಪರರಾರುಮ ನೊಂದೆ ಚಿತ್ರದೊಳ್ ನೆನೆವೊಡೆ ಕಿಲ್ಲೆಯಂ ನೆನೆ'ಯೆಂಬಂತೆ ಕಿಲ್ಲೆಯವರನ್ನು ಕರ್ಣನಿಗೆ ಹೋಲಿಸಿ ಪಂಡಿತರು ವ್ಯಾಖ್ಯಾನಿಸುತ್ತಿದ್ದರು.

ಕಿಲ್ಲೆಯವರ ಅರ್ಥದಾರಿಕೆಯ ಪಾಂಡಿತ್ಯಕ್ಕೆ ಬೆರಗಾಗಿ ತಲೆತೂಗದಿದ್ದವರೇ ಇರಲಿಲ್ಲ. ಅಲ್ಲಿಯವರೆಗೆ ಸುಸಂಸ್ಕೃತರ ಮನ್ನಣೆ ಪಡೆಯದಿದ್ದ ಯಕ್ಷಗಾನ, ತಾಳ ಮದ್ದಲೆಗೆ ತಮ್ಮ ಅಮೋಘ ವಾದವಾಗ್ಮೀಯತೆಯಿಂದ ದಿನ ಬೆಳಗಾಗುವುದರೊಳಗೆ ಜನಾದರಣೆಯನ್ನು ದೊರಕಿಸಿಕೊಟ್ಟವರೇ ಕಿಲ್ಲೆಯವರು.

ಕಿಲ್ಲೆಯವರು ಕಣ್ಮರೆಯಾಗಿ, ಇಂದಿಗೆ ಮೂವತ್ತೆರಡು ವರ್ಷಗಳಾಗಿದ್ದರೂ, ಯಕ್ಷಲೋಕದ ದಿಗಂತದಲ್ಲಿ ಹೊಳೆಯುವ ತಾರೆಯಂತೆ ಕಿಲ್ಲೆಯವರ ಹೆಸರು ಶಾಶ್ವತವಾಗಿದೆ. ಬಹುಮುಖ ಪ್ರತಿಭೆಯ ಅಸಾಮಾನ್ಯ ವ್ಯಕ್ತಿತ್ವದ ಕಿಲ್ಲೆಯವರು ಬಂಟ ಜನಾಂಗಕ್ಕೂ, ದಕ್ಷಿಣ ಕನ್ನಡ ಜಿಲ್ಲೆಗೂ, ಕನ್ನಡ ನಾಡು ನುಡಿಗಳಿಗೂ ಮೇರು ಕೀರ್ತಿಯನ್ನು ಗಳಿಸಿಕೊಟ್ಟರು.

ಇಂತಹ ಅಪರೂಪದ ವ್ಯಕ್ತಿ ಜನಿಸಿದ್ದು ಮಂಗಳೂರು ತಾಲೂಕಿನ 'ಕೂಳೂರು' ಹೊಸಮನೆಯಲ್ಲಿ. ಕಿಲ್ಲೆಯವರದು ಸುಸಂಸ್ಕೃತ ಮತ್ತು ಗೌರವಾನ್ವಿತ ಬಂಟ ಮನೆತನ. ವಿದ್ಯಾರ್ಥಿದೆಸೆಯಲ್ಲೇ ತನ್ನ ಪ್ರತಿಭೆಗೆ ಅವರು ಹೆಸರುವಾಸಿ. ಮಂಗಳೂರಿನಲ್ಲಿ ಮಾಧ್ಯಮಿಕ ಶಿಕ್ಷಣ ಮುಗಿಸಿ, ಉದ್ಯೋಗ ಬೇಟೆಗೆ ಮುಂಬಯಿಗೂ ತೆರಳಿದ್ದರು.

ಮುಂಬಯಿಯ ಪ್ರಧಾನ ಅಂಚೆ ಕಚೇರಿಯಲ್ಲಿ ಒಂದು ವರ್ಷದವರೆಗೆ ಕೆಲಸ ಮಾಡಿದ್ದರು. ಕಿಲ್ಲೆಯವರಿಗೆ ಆ ಉದ್ಯೋಗ ತೃಪ್ತಿ ಕೊಡಲಿಲ್ಲ ಸ್ವಾತಂತ್ರ್ಯ ಚಳವಳಿ ಬಿರುಸಾಗಿದ್ದ ಆ ಕಾಲದಲ್ಲಿ ಉದ್ಯೋಗವನ್ನು ತ್ಯಜಿಸಿ, ರಾಷ್ಟ್ರೀಯ ಚಳವಳಿಯ ಪ್ರವಾಹದಲ್ಲಿ ಧುಮುಕಿ ಹುಟ್ಟೂರಿಗೇ ವಾಪಾಸಾದರು.

ಕಿಲ್ಲೆಯವರು ಹುಟ್ಟಿನಿಂದಲೇ ಒಬ್ಬ ಶ್ರೇಷ್ಠ ವಾಗ್ಮಿಯಾಗಿದ್ದರು. ತಮ್ಮ ಅಧ್ಯಯನ-ಅಧ್ಯಾಪನದಿಂದಲೂ ಅದನ್ನು ಬೆಳೆಸಿಕೊಂಡರು. ಯಕ್ಷಗಾನ, ರಾಜಕೀಯಗಳೆರಡರಲ್ಲೂ ಪಾಂಡಿತ್ಯವನ್ನು ಗಳಿಸಿ ಅದನ್ನು ಸಾರ್ಥಕಪಡಿಸಿದರು.

ಆ ಕಾಲದಲ್ಲಿ ಪ್ರಸಿದ್ಧ ವಾಗ್ಮಿಯಾದ ಬೆಳಗಾವಿಯ ವಕೀಲ ಗಂಗಾಧರ ರಾವ್ ದೇಶಪಾಂಡೆಯವರ ಭಾಷಣಗಳನ್ನು ಮೀರಿಸಿ, ಕಿಲ್ಲೆಯವರ ಭಾಷಣಗಳು ಜನಾಕರ್ಷಣೆ ಗಳಿಸುತ್ತಿದ್ದುವು. "ದೇಶಪಾಂಡೆಯವರ ಭಾಷಣ ಸಮುದ್ರದ ಮೊರೆತವಾದರೆ, ಕಿಲ್ಲೆಯವರ ಭಾಷಣ ಜೋಗ ಜಲಪಾತದ ಭೋರ್ಗರೆತ" ಎಂದು ಜನರು ಪ್ರಶಂಸಿಸುತ್ತಿದ್ದರು.

1926ರಲ್ಲಿ ಮದ್ಯ ನಿಷೇಧ ಪ್ರಚಾರ ಸಮಿತಿಯ ಅಧ್ಯಕ್ಷ ದಿ| ಮುಲ್ಕಿ ರಾಮಕೃಷ್ಣ ಪೂಂಜರ ನೇತೃತ್ವದಲ್ಲಿ ಕಿಲ್ಲೆಯವರು ಹಳ್ಳಿಹಳ್ಳಿಗಳಲ್ಲಿ ಮದ್ಯ ನಿಷೇಧದ ಪರವಾಗಿ ಭಾಷಣಗಳ ಸುರಿಮಳೆಗೈದರು. ಗಾಂಧೀಜಿಯವರ ಕರೆಯಂತೆ, ಉಪ್ಪಿನ ಸತ್ಯಾಗ್ರಹದಲ್ಲಿ ಪಾಲ್ಗೊಂಡು, 1930ರಲ್ಲಿ ಜೈಲಿಗೂ ಹೋದರು. 1937ರ ಚುನಾವಣೆಯಲ್ಲಿ ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಗಳಲ್ಲಿ ಕಾಂಗ್ರೆಸ್ಸಿಗೆ ದೊರೆತ ವಿಜಯದ ಶ್ರೇಯಸ್ಸು ಬಹುತೇಕ ಕಿಲ್ಲೆಯವರ ಪ್ರಾಮಾಣಿಕ ದುಡಿಮೆಗೆ ಸಲ್ಲುತ್ತದೆ.

ಕಿಲ್ಲೆಯವರ ಚುನಾವಣಾ ಭಾಷಣವೆಂದರೆ, ಅದೊಂದು ಸಂಮೋಹನಾಸ್ತ್ರ. ನಿಧಾನವಾಗಿ, ಅಡೆತಡೆಯಿಲ್ಲದೇ ಹೊರಬೀಳುವ ಶಬ್ದ ಸರಣಿಯು ಸಕಲ ವರ್ಗಗಳ ಜನತೆಯನ್ನು ಆಕರ್ಷಿಸುತ್ತಿತ್ತು. ಯಕ್ಷಗಾನದ ಹಿನ್ನೆಲೆಯುಳ್ಳ ಅವರ ದೃಷ್ಟಾಂತಗಳು ಹಳ್ಳಿಗರಿಗೆ ಮೆಚ್ಚುಗೆಯಾಗುತ್ತಿದ್ದುವು. ರಾಷ್ಟ್ರ ನಾಯಕರು ಇಂಗ್ಲೀಷ್-ಹಿಂದಿಯಲ್ಲಿ ಮಾಡಿದ ಭಾಷಣಗಳನ್ನು ಕನ್ನಡಕ್ಕೆ ಭಾಷಾಂತರಿಸುವವರಲ್ಲಿ ಕಿಲ್ಲೆಯವರನ್ನು ಸರಿಗಟ್ಟುವವರೇ ಇರಲಿಲ್ಲ. ಮೂಲ ಭಾಷಣಗಳ ತೂಕವನ್ನು ಕನ್ನಡಕ್ಕೆ ತರುವಾಗ ಸರ್ವರೀತಿಯಲ್ಲೂ ಸರಿಸಮಾನವಾಗಿರುತ್ತಿತ್ತು.

ಇವರು ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳಾಗಿಯೂ ದುಡಿದಿದ್ದರು. ಹರಿಜನೋದ್ಧಾರ, ಪ್ರಾಣಿ ಬಲಿ ನಿಷೇಧ, ಹಿಂದುಳಿದವರ ಅಭಿವೃದ್ಧಿ, ಅಳಿಯ ಕಟ್ಟಿನ ಸುಧಾರಣೆಗಾಗಿ ವಿಶೇಷ ಶ್ರಮಿಸಿದರು. ರಾಜಕೀಯ ಚಟುವಟಿಕೆಗಳೇ ಅಲ್ಲದೆ ಜನರಲ್ಲಿ ಅಡಗಿದ್ದ, ಅಂಧಶ್ರದ್ಧೆ, ಮೂಢನಂಬಿಕೆಗಳನ್ನೂ ತೊಡಗಿಸಲು ಹೆಣಗಿದರು.

ಬರವಣಿಗೆಯಲ್ಲೂ ಕಿಲ್ಲೆಯವರದು ಎತ್ತಿದಕೈ. ಕನ್ನಡ-ತುಳು ಭಾಷೆಗಳಲ್ಲಿ ಅಸಾಧಾರಣ ಪಾಂಡಿತ್ಯ. ಇವರು ಬರೆದ ಕೃತಿಗಳ ಸಂಖ್ಯೆಯಲ್ಲಿ ಕಡಿಮೆಯಾದರೂ ಸತ್ವದಲ್ಲಿ ಮಿಗಿಲಾದವು. ಗದ್ಯ-ಪದ್ಯಗಳೆರಡರಲ್ಲೂ ಚೇತೋಹಾರಿಯಾಗಿ ಬರೆಯಬಲ್ಲ, ಕಿಲ್ಲೆಯವರ ಬಗ್ಗೆ, "ಬಲ್ಲಿದ ಬಾಸೆಯ ಕಲೆಗಂ ಕಿಲ್ಲೆಯೇ, ನೀನೋರ್ವನೆ ಮೊದಲಿಗನೆಂ ದೀರ್ದ್ಯ" ಎಂದು ಕವಿಭೂಷಣ ವೆಂಕಪ್ಪ ಬರೆದಿದ್ದಾರೆ.

ತುಳು ಭಾಷೆಯ ವಾರ್ಧಕ ಷಟ್ಪದಿಯಲ್ಲಿ ಅವರ ಕೃತಿಗಳು ರಾಘವಾಂಕ, ಲಕ್ಷ್ಮೀಶ, ಷಡಕ್ಷರಿ ಕವಿಗಳ ಕಾವ್ಯಕ್ಕೆ ಸರಿ ತೂಗುವಂತಿವೆ. ಇವರ ಕವನಗಳಲ್ಲಿ ದೇಶಭಕ್ತಿಯ ಗೀತೆಗಳು ಒಂದು ತೆರನಾದರೆ, ಭಾವಗೀತೆಗಳು ಇನ್ನೊಂದು ತೆರ. ತಮ್ಮ ವಾಗ್ಮೀಯತೆಯ ಬಗ್ಗೆ ಬರೆಯುತ್ತಾ

ಅರಿಯದಿರೆ ನಾಚಿಕೆಯ ತಲೆದೋರು
ತಿರುದೆನಗೆ,
ಸರಿಯಾದ ಮಾತುಗಳು ಬಾರದಿರೆ
ಹೆದರಿ,
ಶಿರವೆತ್ತಿ ನೋಡಲಾರನೆ ಭೂಮಿ
ತಿರುಗುತಿದೆ
ತಿರುಗುವೆನು ನಾರದರ ಚಕ್ರವನೆ
ಹಿಡಿದು

ಎಂದಿದ್ದಾರೆ. ತುಳುನಾಡಿನ ಇತಿಹಾಸ ಸಂಸ್ಕೃತಿಗಳ ಬಗ್ಗೆ ಬರೆಯಬೇಕೆಂಬ ಹಂಬಲ ಅವರಿಗಿತ್ತು. ಕನಸು ನನಸಾಗುವ ಮೊದಲೇ 1953ರಲ್ಲಿ ತಮ್ಮ 53ನೇ ವಯಸ್ಸಿನಲ್ಲಿ ಅವರು ಕ್ಯಾನ್ಸರ್‌ರೋಗದಿಂದ ಕೊನೆಯುಸಿರೆಳೆದರು.

ಸ್ವಾತಂತ್ರ್ಯ ಆಂದೋಲನದಲ್ಲಿ ಪರಿಣಾಮಕಾರೀ ಪಾತ್ರವನ್ನು ವಹಿಸಿದ್ದರೂ ಆ ಮೇಲೆ ಅವರಿಗೆ ಯಾವ ಸ್ಥಾನವೂ ಸಿಗಲಿಲ್ಲ. ಈಗ 'ಕಿಲ್ಲೆ ಸ್ಮಾರಕ ಗ್ರಂಥ'ವನ್ನು ಬಿಟ್ಟರೆ, ಅವರ ಸ್ಮೃತಿ ಏನೂ ಉಳಿದಿಲ್ಲ.

ಹಿಂದೊಬ್ಬ ಕಿಲ್ಲೆ ಇದ್ದರು. ಅವರನ್ನು ಕೊಟ್ಟ ಬಂಟ ಜನಾಂಗದಲ್ಲಿ ಮುಂದೊಬ್ಬ ಕಿಲ್ಲೆ ಬರುವುದೆಂದು?

— ವೇಣುಗೋಪಾಲ ಹೆಗ್ಡೆ

ಹೋರಾಟ ನಡೆಸಲು ಆಟೋರಿಕ್ಷ ಚಾಲಕರ ನಿರ್ಧಾರ

(ಮುಂಗಾರು ವರದಿ)

ಬೆಂಗಳೂರು, ಅ. 6– ಆಟೋರಿಕ್ಷಾ ಚಾಲಕರ ಲೈಸೆನ್ಸ್ ನೋಂದಾವಣೆಗೆ ಹೆಚ್ಚಿಸಿರುವ ಸುಂಕ ಹಾಗೂ ಚಾಲಕರಿಗೆ ಪೊಲೀಸರು ವಿಧಿಸುವ ದಂಡವನ್ನು ಕಡಿಮೆ ಮಾಡಬೇಕು. ಇದೇ ಮುಂತಾದ ಬೇಡಿಕೆಗಳನ್ನು ಒತ್ತಾಯಿಸಿ ಹೋರಾಟ ನಡೆಸುವ ನಿರ್ಧಾರವನ್ನು ಆಟೋರಿಕ್ಷಾ ಚಾಲಕ ಸಂಘ ತೆಗೆದುಕೊಂಡಿದೆ.

ಈಚೆಗೆ ನಡೆದ ಆಟೋರಿಕ್ಷಾ ಚಾಲಕರ ಸಂಘದ 11ನೇ ವಾರ್ಷಿಕೋತ್ಸವದಲ್ಲಿ ಈ ಕುರಿತು ನಿರ್ಣಯ ತೆಗೆದುಕೊಳ್ಳಲಾಯಿತೆಂದು ಸಂಘದ ಪ್ರಧಾನ ಕಾರ್ಯದರ್ಶಿ ರಮೇಶ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸಂಘದ ನೂತನ ಕಾರ್ಯಕಾರಿ ಸಮಿತಿಗೆ ಬಿ. ಸುಬ್ಬರಾವ್ (ಅಧ್ಯಕ್ಷರು), ಎ. ಪಿ. ನರಸಿಂಹನ್ (ಉಪಾಧ್ಯಕ್ಷರು), ಎ. ವಿ. ರಮೇಶ್ (ಪ್ರಧಾನ ಕಾರ್ಯದರ್ಶಿ), ಬಿ. ಎಸ್. ನಾರಾಯಣ (ಸಂಘಟನಾ ಕಾರ್ಯದರ್ಶಿ), ಟಿ. ಎನ್. ನಾರಾಯಣಮೂರ್ತಿ (ಸಹಕಾರ್ಯದರ್ಶಿ) ಅಂಬಳಗನ್ (ಸಹಕಾರ್ಯದರ್ಶಿ), ಎಚ್. ಆರ್. ರವಿ (ಜಂಟಿ ಕಾರ್ಯದರ್ಶಿ), ಎಸ್. ಟಿ. ಅರಸು (ಖಜಾಂಚಿ) ಹಾಗೂ 20 ಮಂದಿ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಆಯ್ಕೆಯಾಗಿದ್ದಾರೆಂದು ರಮೇಶ್ ಅವರು ತಿಳಿಸಿದ್ದಾರೆ.

ಪ್ರವಾಸ

ಬೆಂಗಳೂರು, ಅ. 6 – ಕರ್ನಾಟಕ ವಿಧಾನ ಪರಿಷತ್ತಿನ ಸರಕಾರಿ ಭರವಸೆಗಳ ಸಮಿತಿ ಸದಸ್ಯರು ಅಧ್ಯಕ್ಷ ಕೆ. ಎನ್. ನಾಗೇಗೌಡರ ಮುಖಂಡತ್ವದಲ್ಲಿ ರಾಜ್ಯದ ಹೊರಗಡೆ 14 ದಿನಗಳ ಪ್ರವಾಸಕ್ಕಾಗಿ ಅ. 26ರಂದು ಬೆಂಗಳೂರಿನಿಂದ ತೆರಳುವರು.

ಸಮಿತಿಯು ತಮಿಳುನಾಡು, ಅಂಡಮಾನ್ ಹಾಗೂ ನಿಕೋಬಾರ್, ಸಿಕ್ಕಿಂ, ಬಿಹಾರ, ಕಾಠ್ಮಂಡು (ನೇಪಾಳ) ಮತ್ತು ದೆಹಲಿಗೆ ಭೇಟಿಕೊಡಲಿದೆ.

ಗುಲ್‌ಮೊಹರ್ ಉರುಳಿಬಿತ್ತು....

(ಮುಂಗಾರು ವರದಿ)

ಕಾರವಾರ, ಸೆ. 6– ಇಲ್ಲಿನ ರಸ್ತೆಯಂಚಿನಲ್ಲಿದ್ದ ಗುಲ್‌ಮೊಹರ್ ಮರವು ವಿಪರೀತವಾಗಿ ಬಂದ ಮಳೆಯ ರಭಸಕ್ಕೆ ಅ. 1 ರಂದು ರಾತ್ರಿ ರಸ್ತೆಯಲ್ಲಿ ಹೋಗುತ್ತಿದ್ದ ಆಟೋರಿಕ್ಷಾದ ಮೇಲೆ ಉರುಳಿಬಿದ್ದಿತು.

ಆಟೋಚಾಲಕನಿಗೆ ತೀವ್ರಗಾಯಗಳಾಗಿದ್ದು, ಪ್ರಯಾಣಿಕರು ಪಕ್ಕಗಾಪಾಯದಿಂದ ಪಾರಾಗಿದ್ದಾರೆ.

ಗುಲ್‌ಮೊಹರ್ ಮರವು ಸಾಮಾನ್ಯವಾಗಿ ಬೆಳೆದು ನಿಂತಾಗ ಅದನ್ನು ಕತ್ತರಿಸುವುದು ವಾಡಿಕೆ. ಮರದ ಬೇರುಗಳು ಆಳಕ್ಕೆ ಇಳಿಯದೆ, ಗೆದ್ದಲು ಹತ್ತಿ ನಾಶವಾಗುವುದರಿಂದ ಗುಲ್‌ಮೊಹರ್ ದೊಡ್ಡದಾದ ಮೇಲೆ ಉರುಳುವುದು ಸ್ವಾಭಾವಿಕ. ಪುರಸಭೆ ಇಂತಹ ಮರಗಳನ್ನು ಪತ್ತೆ ಹಚ್ಚಿ ಕಟಾವು ಮಾಡಿಸುತ್ತಿದ್ದುದು ಉಂಟು. ಈ ಮರವನ್ನು ಹಾಗೆ ಮಾಡದಿರುವುದೇ ಈ ರೀತಿ ಬೀಳುವಿಕೆಗೆ ಕಾರಣವಾಯಿತೆಂದು ಅಲ್ಲಿನ ಜನ ಹೇಳುತ್ತಾರೆ.

ಮರ ಉರುಳಿಬಿದ್ದು ಜಖಂ ಗೊಂಡ ರಿಕ್ಷಾದ ಬಗ್ಗೆ ಹಾಗೂ ತೀವ್ರಗಾಯಗೊಂಡ ಚಾಲಕ ನಾರಾಯಣ ರಾಮಚಂದ್ರ ನಾಯ್ಕ ಅವರ ಸ್ಥಿತಿ ಬಗ್ಗೆ ಅವರ ಕುಟುಂಬದವರು ಚಿಂತಾಕ್ರಾಂತರಾಗಿದ್ದಾರೆ.

ಚಲಚ್ಚಿತ್ರ ಸಲಹಾ ಸಮಿತಿ ವರದಿ
ಸ್ವಾಯತ್ತ ಮಂಡಳಿ ರಚನೆಗೆ ಶಿಫಾರಸು

(ಮುಂಗಾರು ವರದಿ)

ಬೆಂಗಳೂರು, ಅ. 6– ಚಿತ್ರ ತಯಾರಿಕೆ ವಿತರಣೆ ಹಾಗೂ ಪ್ರದರ್ಶನಗಳಿಗೆ ಸಂಬಂಧಿಸಿದಂತೆ ನೀತಿ ನಿರೂಪಣೆ ಮಾಡಲು ಸ್ವಯಂ ಅಧಿಕಾರದ ಸ್ವಾಯತ್ತ ಮಂಡಳಿ ರಚಿಸಬೇಕೆಂದು ರಾಜ್ಯ ಸರಕಾರ ನೇಮಿಸಿದ ಚಲನ ಚಿತ್ರ ಸಲಹಾ ಸಮಿತಿ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಸಮಿತಿಯ ಅಧ್ಯಕ್ಷ ಎಂ. ಭಕ್ತವತ್ಸಲ ಅವರು ಸಮಿತಿಯ ವರದಿಯನ್ನು ವಾರ್ತಾ ಸಚಿವ ಡಾ. ಜೀವರಾಜ ಆಳ್ವ ಅವರಿಗೆ ಶನಿವಾರ ಅರ್ಪಿಸಿದರು.

ರಾಷ್ಟ್ರದ 18ರಾಜ್ಯಗಳಿಗೆ ಭೇಟಿ ನೀಡಿ ಅಲ್ಲಿನ ಸಿನಿಮಾಟೋಗ್ರಫಿ ನಿಯಮಗಳನ್ನು ಪೂರ್ಣವಾಗಿ ಅಭ್ಯಸಿಸಿ ರಾಜ್ಯದಲ್ಲಿರುವ ಸಿನಿಮಾಟೋಗ್ರಫಿ ನಿಯಮಾವಳಿಗಳನ್ನು ಸರಳೀಕರಣ ಮಾಡಬೇಕೆಂದು ಸಮಿತಿ ವರದಿಯಲ್ಲಿ ಶಿಫಾರಸು ಮಾಡಿದೆ ಎಂದು ಹೇಳಿದರು.

ಚಿತ್ರರಂಗದ ಇತಿಹಾಸದಲ್ಲಿ ಪ್ರಪ್ರಥಮ ಬಾರಿಗೆ ಅತ್ಯಂತ ಕ್ರಾಂತಿಕಾರಿ ಕ್ರಮ ಜಾರಿಗೆ ತರುವ ಈ ಮಸೂದೆಯನ್ನು ತಕ್ಷಣ ಕಾನೂನನ್ನಾಗಿ ಅಳವಡಿಸಬೇಕೆಂದು ಒತ್ತಾಯಪಡಿಸಿದೆ ಎಂದು ಭಕ್ತವತ್ಸಲ ತಿಳಿಸಿದರು.

ಬೆಂಗಳೂರು ಕೆಂಪೇಗೌಡ ರಸ್ತೆ ಹಾಗೂ ಮೈಸೂರು ನಗರಗಳಲ್ಲಿ ಮಿನಿ ಚಿತ್ರಮಂದಿರಗಳ ನಿರ್ಮಾಣಕ್ಕೆ ಸಮಿತಿ ಒತ್ತಾಯಿಸಿದೆ.

ಈ ವರದಿ ಜಾರಿಗೆ ತರುವುದರಿಂದ ಚಿತ್ರಮಂದಿರಗಳಲ್ಲಿ ಪ್ರದರ್ಶನ ಹಾಗೂ ಬೆಳಕು, ಶಬ್ದಗಳ ಗುಣಮಟ್ಟ ಕಾಪಾಡಿಕೊಂಡು ಬರುವ ಬಗ್ಗೆ ತನಿಖೆಗೂ ಅವಕಾಶವಾಗುತ್ತದೆ ಎಂದು ಅವರು ತಿಳಿಸಿದರು.

ಕರ್ನಾಟಕ ರಾಜ್ಯ ಚಲನಚಿತ್ರ ಅಭಿವೃದ್ಧಿ ನಿಗಮ, ಕನ್ನಡ ಚಿತ್ರಗಳ ಬೆಳವಣಿಗೆಗೆ ಪ್ರೋತ್ಸಾಹ ನೀಡಬೇಕು. ಸಣ್ಣ ಚಿತ್ರಗಳ ಹಂಚಿಕೆಯನ್ನು ನಿಗಮವಹಿಸಿಕೊಳ್ಳಬೇಕು. ಕನ್ನಡ ಚಿತ್ರಗಳಿಗೆ ವಿದೇಶಿ ಮಾರುಕಟ್ಟೆ ಸಿಗುವ ಹಾಗೆ ಕಾರ್ಯಕ್ರಮವನ್ನು ರೂಪಿಸಿಕೊಳ್ಳಬೇಕೆಂದು ಸಮಿತಿ ಸಲಹೆ ಮಾಡಿದೆ.

ರಾಜ್ಯಾದ್ಯಂತ ಚಲನ ಚಿತ್ರ ಮಂದಿರಗಳಿಗೆ ಲೈಸೆನ್ಸ್ ನೀಡುವುದನ್ನು ವಾರ್ತಾ ಮತ್ತು ಪ್ರಚಾರ ಇಲಾಖೆಗೆ ಕೊಡಬೇಕೆಂದು ಸಮಿತಿ ಸಲಹೆ ಮಾಡಿದೆ ಅಲ್ಲದೆ, ಲೈಸೆನ್ಸ್ ಕೊಡುವ ಮುಂಚೆ ಸಿನಿಮಾ ಮಂದಿರಗಳ ಪ್ರಾಜೆಕ್ಟರ್ ಮತ್ತು ಶಬ್ದ ಹಾಗೂ ಬೆಳಕು ಅದರ ಬಗ್ಗೆ ತಾಂತ್ರಿಕ ಸಲಹಾ ಸಮಿತಿಯನ್ನು ಕೇಳಿ ಲೈಸೆನ್ಸ್ ನೀಡಬೇಕೆಂದು ಸಮಿತಿ ಸೂಚಿಸಿದೆ.

ವರ್ಗಾವರ್ಗಿ

(ಮುಂಗಾರು ವರದಿ)

ಬೆಂಗಳೂರು, ಅ. 6– ಐ. ಎ. ಎಸ್. ಅಧಿಕಾರಿ ಟಿ. ಪಿ. ಇಸ್ಸಾರ್ ಅವರು ಕಂದಾಯ ಕಮಿಷನರ್ ಹಾಗೂ ಕಂದಾಯ ಇಲಾಖೆಯ ಕಾರ್ಯದರ್ಶಿಯಾಗಿ ನೇಮಕಗೊಂಡಿರುವರು. ಇದುವರೆಗೆ ಕಂದಾಯ ಕಮಿಷನರ್ ಆಗಿದ್ದ ಎಸ್. ವೆಂಕಟೇಶ್ ಅವರು ನಿವೃತ್ತರಾದ ಕಾರಣ ಇಸ್ಸಾರ್ ಅವರನ್ನು ಆ ಸ್ಥಳಕ್ಕೆ ನೇಮಿಸಲಾಗಿದೆ.

ಇಸ್ಸಾರ್ ಅವರು ಮುಂದಿನ ಆಜ್ಞೆಯವರೆಗೆ ಈಗ ಹೊಂದಿರುವ ಮುಖ್ಯ ಚುನಾವಣಾ ಅಧಿಕಾರಿ ಹಾಗೂ ತಿ. ಪಿ. ಎ. ಹುದ್ದೆಗಳಲ್ಲಿಯೂ ಮುಂದುವರಿಯುವರು.

ಇದುವರೆಗೆ ಕರ್ನಾಟಕ ಮುಖ್ಯ ಅರಣ್ಯ ಸಂರಕ್ಷಣಾ ಅಧಿಕಾರಿಯಾಗಿದ್ದ ಎಸ್. ಆರ್. ಭಗವತ್ ಅವರು ನಿವೃತ್ತಿ ಹೊಂದಿರುವುದರಿಂದ ಅವರ ಸ್ಥಾನಕ್ಕೆ ಐ. ಎಫ್. ಎಸ್. ಅಧಿಕಾರಿ ಎಸ್. ಶ್ಯಾಮ ಸುಂದರ್ ಅವರನ್ನು ಬಡ್ತಿ ನೀಡಿ ಮುಖ್ಯ ಪ್ರಿನ್ಸಿಪಾಲ್ ಅರಣ್ಯ ಸಂರಕ್ಷಣಾಧಿಕಾರಿಯಾಗಿ ನೇಮಿಸಲಾಗಿದೆ.

ಇದುವರೆಗೆ ಮೈಸೂರ್ ಮಿನರಲ್ಸ್, ಬೆಂಗಳೂರು, ಇದರ ಸಲಹಾ ನಿರ್ದೇಶಕರಾಗಿದ್ದ ಗಣಿ ಮತ್ತು ಭೂವಿಜ್ಞಾನದ ನಿರ್ದೇಶಕರಾದ ಸಿ. ಎನ್. ವೆಂಕಟ್ರಾಮನ್ ಅವರನ್ನು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಸೇವೆಯಿಂದ ಹೊರತು ಪಡಿಸಿ, ಕೇವಲ ಗಣಿ ಮತ್ತು ಭೂವಿಜ್ಞಾನದ ನಿರ್ದೇಶಕರನ್ನಾಗಿ ನೇಮಿಸಲಾಗಿದೆ.

ಬರಪೀಡಿತ ಪ್ರದೇಶಕ್ಕೆ ಮೇವು ನೆರವು: ಪ್ರಕಾಶ್

(ಮುಂಗಾರು ವರದಿ)

ಬೆಂಗಳೂರು, ಅ. 6– ಅರಣ್ಯಗಳಲ್ಲಿ ಬೆಳೆಯುವ ದನಗಳ ಮೇವಿನ ಹುಲ್ಲನ್ನು ಕೊಯ್ದು ಹತ್ತಿರದ ಬರಪೀಡಿತ ಪ್ರದೇಶಗಳಿಗೆ ಸಾಗಾಣಿಕೆ ಮಾಡುವ ಕೆಲಸವನ್ನು ಜಿಲ್ಲಾಧಿಕಾರಿಗಳಿಗೆ ವಹಿಸಿಕೊಡಲಾಗುವುದೆಂದು ಕೃಷಿ ಸಹಾಯಕ ಸಚಿವ ಎಂ.ಪಿ. ಪ್ರಕಾಶ್ ಅವರು ಗುರುವಾರ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಅರಣ್ಯದಲ್ಲಿ 40 ಲಕ್ಷ ಟನ್ ಹುಲ್ಲು ಸಿಗುತ್ತಿದೆ ಎಂದು ಅರಣ್ಯ ಅಧಿಕಾರಿಗಳು ಅಂದಾಜು ಮಾಡಿದ್ದಾರೆ. ಆಯಾಯ ಜಿಲ್ಲೆಯಲ್ಲಿರುವ ಅರಣ್ಯಗಳಲ್ಲಿ ಬೆಳೆದಿರುವ ಹುಲ್ಲನ್ನು ಕೊಯ್ಯಲು ಹಾಗೂ ಸಾಗಾಣಿಕೆ ಮಾಡುವ ಕೆಲಸವನ್ನು ಜಿಲ್ಲಾಧಿಕಾರಿಗಳಿಗೆ ವಹಿಸಿಕೊಡಲು ಕಂದಾಯ ಸಚಿವರೊಂದಿಗೆ ಚರ್ಚೆ ನಡೆಸಲಾಗುವುದು ಎಂದರು.

ಮೇವನ್ನು ಬೆಳೆಸುವುದಕ್ಕಾಗಿ ಪಶುಸಂಗೋಪನಾ ತೋಟಗಾರಿಕೆ ಹಾಗೂ ಕೃಷಿ ಇಲಾಖೆಗೆ ಸರಕಾರ ಹಣ ನೀಡಿದೆ. ತೋಟಗಾರಿಕೆ ಇಲಾಖೆಯಲ್ಲಿ 18000 ಎಕರೆಯಲ್ಲಿ ಹುಲ್ಲನ್ನು ಬೆಳೆಸಲಾಗಿದೆ ಇನ್ನು 10,000 ಎಕರೆಯಲ್ಲಿ ಹುಲ್ಲು ಬೆಳೆಸಲು ನೀರಿನ ವ್ಯವಸ್ಥೆಗಾಗಿ ಬೋರ್‌ವೆಲ್‌ಗಳನ್ನು ತೋಡಿಸಲಾಗಿದೆ. ಅಲ್ಲಿ ಆಫ್ರಿಕನ್ ಮಾದರಿಯ ಹುಲ್ಲನ್ನು ಬೆಳೆಯಲಾಗುವುದು ಎಂದರು.

ಕೃಷಿ ಇಲಾಖೆಗೆ ಸೇರಿದ 63 ಫಾರಂಗಳಲ್ಲಿನ ಸುಮಾರು 1,200 ಎಕರೆಯಲ್ಲಿ ಹುಲ್ಲು ಬೆಳೆಸಲು ಈಗಾಗಲೇ ಯೋಜನೆಯನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಆಹಾರ ಧಾನ್ಯಗಳನ್ನು ಸಂಗ್ರಹಿಸುವ ಸಲುವಾಗಿ ಈ ವರ್ಷ 19 ಲಕ್ಷ ಟನ್ ಮುಂಗಾರಿ ಹಾಗೂ 66 ಲಕ್ಷ ಟನ್ ಹಿಂಗಾರಿ ಆಹಾರ ಧಾನ್ಯ ಸಂಗ್ರಹಿಸುವ ಗುರಿ ಹೊಂದಲಾಗಿತ್ತು. ಆದರೆ ಈಗ ಶೇ. 43ರಷ್ಟು ಮಾತ್ರ ಸಂಗ್ರಹಿಸುವ ಅಂದಾಜು ಮಾಡಲಾಗಿದೆ ಎಂದರು.

ಚಿತ್ರದುರ್ಗ ವಿಭಾಗ (ಶಿವಮೊಗ್ಗ-ತುಮಕೂರು) ದಲ್ಲಿ ಶೇ. 72ರಷ್ಟು ಆಹಾರಧಾನ್ಯ ಸಂಗ್ರಹಿಸುವ ಗುರಿ ಹೊಂದಲಾಗಿತ್ತು. ಆದರೆ ಇದರಲ್ಲಿ ಶೇ. 28ರಷ್ಟು ನಷ್ಟವಾಗಿದೆ. ಮೈಸೂರು ವಿಭಾಗ (ಮಂಡ್ಯ-ಕೊಡಗು)ದಲ್ಲಿ ಶೇ.87ರಷ್ಟನ್ನು ಉತ್ಪಾದಿಸುವ ಗುರಿ ಹೊಂದಲಾಗಿತ್ತು. ಆದರಲ್ಲಿ ಶೇ. 30ರಷ್ಟು ನಷ್ಟವಾಗಿದೆ ಎಂದು ಹೇಳಿದರು.

ಹಾಸನ ವಿಭಾಗ (ದಕ್ಷಿಣ ಕನ್ನಡ)ದಲ್ಲಿ ಶೇ. 20 ರಷ್ಟು ಅಂದಾಜು ಮಾಡಲಾಗಿತ್ತು. ಆದರೆ ಅದರಲ್ಲಿ ಶೇ. 30 ರಷ್ಟು ನಷ್ಟವಾಗಿದೆ. ಧಾರವಾಡ ವಿಭಾಗ (ಉತ್ತರ ಕನ್ನಡ)ದಲ್ಲಿ ಅಂದಾಜು ಶೇ. 80ರಷ್ಟು ನಷ್ಟ ಶೇ. 20 ರಷ್ಟು ಬೆಳಗಾವಿ ವಿಭಾಗ (ಬಿಜಾಪುರ)ದಲ್ಲಿ ಶೇ. 91 ರಷ್ಟು ಉತ್ಪಾದನೆಯ ಗುರಿ ಹೊಂದಲಾಗಿತ್ತು. ಆದರೆ ಈಗಾಗಲೇ ಶೇ. 9ರಷ್ಟು ನಷ್ಟವಾಗಿದೆ.

ರಾಯಚೂರು ವಿಭಾಗ (ಬಳ್ಳಾರಿ) ಶೇ. 52ರಷ್ಟು ಉತ್ಪಾದನಾ ಗುರಿ ಹೊಂದಲಾಗಿತ್ತು. ಅದರಲ್ಲಿ ಶೇ. 48ರಷ್ಟು ನಷ್ಟವಾಗಿದೆ ಎಂದು ತಿಳಿಸಿದ ಸಚಿವರು ಗುಲ್ಬರ್ಗಾ ವಿಭಾಗ (ಬೀದರ್) ದಲ್ಲಿ ಶೇ. 52ರಷ್ಟು ಅಂದಾಜು ಮಾಡಿದ್ದು, ನಷ್ಟ ಶೇ. 42ರಷ್ಟು ಆಗಿದೆ ಎಂದು ಸ್ಪಷ್ಟಪಡಿಸಿದರು.

7ಲಕ್ಷ 11,54 ಸಾವಿರ ಟನ್ ಜೋಳ ಸಂಗ್ರಹಿಸುವ ಗುರಿ ಹೊಂದಲಾಗಿತ್ತು. ಆದರೆ ಶೇ. 48 ರಷ್ಟು ನಷ್ಟವಾಗಿದೆ. 14ಲಕ್ಷ 48 ಸಾವಿರ ಟನ್. ರಾಗಿ ಸಂಗ್ರಹಿಸುವ ಗುರಿ ಇಟ್ಟುಕೊಂಡು ಶೇ. 63 ರಷ್ಟು ಅಂದಾಜು ಮಾಡಲಾಗಿತ್ತು. ಇದರಲ್ಲಿ ಶೆ. 37ರಷ್ಟು ನಷ್ಟವಾಗಿದೆ.

5 ಲಕ್ಷ 79 ಸಾವಿರ ಟನ್ ಗೋಧಿ ಸಂಗ್ರಹಿಸುವ ಗುರಿ ಇದ್ದಿತು. ಅದರಲ್ಲಿ ಶೇ. 57ರಷ್ಟು ಅಂದಾಜು ಮಾಡಲಾಗಿತ್ತು ಈಗ ಅದರಲ್ಲಿ ಶೇ. 41ರಷ್ಟು ನಷ್ಟವಾಗಿದೆ ಎಂದು ತಿಳಿಸಿದರು.

ಸುಮಾರು 10ಲಕ್ಷ 8,000 ಟನ್. ನವಣೆ ಇತ್ಯಾದಿ ಆಹಾರ ಧಾನ್ಯವನ್ನು ಸಂಗ್ರಹಿಸುವ ಗುರಿ ಹೊಂದಲಾಗಿತ್ತು. ಅದರಲ್ಲಿ ಶೇ. 69ರಷ್ಟು ಅಂದಾಜು ಮಾಡಲಾಗಿತ್ತು. ಅದರಲ್ಲಿ ಈಗ ಶೇ. 31ರಷ್ಟು ನಷ್ಟವಾಗಿದೆ ಎಂದು ಅವರು ತಿಳಿಸಿದರು.

1984-85ರಲ್ಲಿ 87 ಲಕ್ಷ ಟನ್ ಆಹಾರ ಧಾನ್ಯ ಸಂಗ್ರಹಿಸುವ ಗುರಿ ಹೊಂದಲಾಗಿತ್ತು. ಅದರಲ್ಲಿ ಈ ವರ್ಷ 85 ಲಕ್ಷ ಟನ್ ಆಹಾರ ಧಾನ್ಯ ಸಂಗ್ರಹಿಸಲು ಗುರಿ ಇಟ್ಟುಕೊಳ್ಳಲಾಗಿದೆ ಎಂದು ಅವರು ತಿಳಿಸಿದರು.

"ಜನತೆ ಬೇಡವೆಂದರೆ ಅಧಿಕಾರ ತ್ಯಜಿಸುವೆ" ತಮ್ಮ ಖಾತೆಯ ಬಗ್ಗೆ ಬರುತ್ತಿರುವ ಟೀಕೆಯ ಬಗ್ಗೆ ಶಿಕ್ಷಣ ಸಚಿವ ಎಂ. ರಘುಪತಿ ಅರಸೀಕೆರೆ ತಾಲೂಕಿನ ಹಾರ್ನಹಳ್ಳಿಯಲ್ಲಿ ಕೋಡಿ ಮಠದ ವತಿಯಿಂದ ಈಚೆಗೆ ತಮಗೆ ನೀಡಿದ ಸನ್ಮಾನ ಸಮಾರಂಭದಲ್ಲಿ ಈ ಪ್ರತಿಕ್ರಿಯೆ ವ್ಯಕ್ತಪಡಿಸಿದರು. ಮಠದ ಪೀಠಾಧ್ಯಕ್ಷ ಶಿವಾನಂದಸ್ವಾಮಿ ಹಾಗೂ ಗಂಡಸಿ ಕ್ಷೇತ್ರದ ಶಾಸಕ ನಂಜೇಗೌಡ ಅವರನ್ನು ಕಾಣಬಹುದು.

ಆಕಾಶವಾಣಿ

ಬೆಂಗಳೂರು ಭದ್ರಾವತಿ ಮೈಸೂರು

7-10-85 (ಸೋಮವಾರ)

ಬೆಳಗ್ಗೆ 6.35 ಚಿಂತನ, 6.40 ರೈತರಿಗೆ ಸಲಹೆ, 6.45 ಜನಪದ ಗೀತೆ, 7.20 ಜಯಶ್ರೀ ರಂಗನಾಥನ್ ಭಾವಗೀತೆ 7.45 ಚಿತ್ರಗೀತೆ, 8.21 ನೀಲವ್ವಾ ಕದಂಬಿ: ವೀಣಾವಾದನ ಮತ್ತು ಹಾಡುಗಾರಿಕೆ.

ಮಧ್ಯಾಹ್ನ 12.30 ನಿಮ್ಮ ಮೆಚ್ಚಿನ ಚಿತ್ರಗೀತೆ, 1.10 ಆರ್. ಚಂದ್ರಿಕ: ದೇವರನಾಮ, 1.30 ಗ್ರಾಮಲಕ್ಷ್ಮಿ, 2.10 ಚಿತ್ರಗೀತೆ, 3.00 ಪರಿಮಳ: 'ಕವಿರಾಜಮಾರ್ಗ' ಸಾಹಿತ್ಯ ಕಾರ್ಯಕ್ರಮ, 3.25 ನಂಗನವನ: ಏಕಲವ್ಯ, ಸಂಜೆ 5.30 ಚಿತ್ರಗೀತೆ, 5.45 ಜಿಲ್ಲಾ ವಾರ್ತಾಪತ್ರ, 6.15 ಕಾರ್ಮಿಕರಿಗಾಗಿ, 6.50 ಕೃಷಿರಂಗ, 7.45 ಚಿತ್ರಗೀತೆ, 8.10 ಯುವವಾಣಿ, 8.30 ಕ್ರೀಡಾಕಾರ್ಯಕ್ರಮ, 9.16 ಡಾ|| ರಾಘವೇಂದ್ರ ಗದಗ್‌ಕರ್ ಅವರಿಂದ ಭಾಷಣ, 9.30 ಕುವೆಂಪು ಅವರ 'ಶೂದ್ರ ತಪಸ್ವಿ' ನಾಟಕ, 10.00 'ಶ್ಯಾಂ-ಎ-ಗಜಲ್' ಉರ್ದು ಕಾರ್ಯಕ್ರಮ, 10.30 ಯುವವಾಣಿ.

ಅ. 27 ಬಿ. ಜೆ. ಪಿ ರಾಜ್ಯ ಘಟಕದ ಅಧ್ಯಕ್ಷರ ಆಯ್ಕೆ

(ಮುಂಗಾರು ವರದಿ)

ಬೆಂಗಳೂರು, ಅ. 6– ಭಾರತೀಯ ಜನತಾ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರ ಚುನಾವಣೆಯು ಅಕ್ಟೋಬರ್ 27 ರಂದು ನಡೆಯಲಿದ್ದು, ಇದಕ್ಕೆ ಮುನ್ನ ಮಂಡಲ, ತಾಲೂಕು ಹಾಗೂ ಜಿಲ್ಲಾ ಸಮಿತಿಗಳ ಚುನಾವಣೆಗಳು ಅಕ್ಟೋಬರ್ 15ರೊಳಗೆ ಪೂರ್ಣಗೊಳ್ಳಲಿವೆ ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ಬಿ. ಶಿವಪ್ಪ ಗುರುವಾರ ಇಲ್ಲಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದ ಅವರು ಪಕ್ಷದ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಸಭೆ ಈ ತಿಂಗಳ 8 ಹಾಗೂ 9ರಂದು ನಡೆಯಲಿದೆ. ಮತ್ತು ರಾಷ್ಟ್ರೀಯ ಪರಿಷತ್ತಿನ ಅಧಿವೇಶನ 10ರಿಂದ 13ರವರೆಗೆ ನಾಲ್ಕು ದಿನಗಳ ಕಾಲ ಗುಜರಾತಿನಲ್ಲಿ ಜರುಗಲಿದೆ. ಈ ಅಧಿವೇಶನಕ್ಕೆ ರಾಜ್ಯದಿಂದ ಸುಮಾರು 100ಮಂದಿ ಪ್ರತಿನಿಧಿಗಳು ತೆರಳಲಿದ್ದಾರೆ ಎಂದು ತಿಳಿಸಿದರು.

ತಮ್ಮ ಅಧ್ಯಕ್ಷಾವಧಿಯ ಎರಡುವರೆ ವರ್ಷಗಳಲ್ಲಿ ರಾಜ್ಯದಲ್ಲಿ ಪಕ್ಷ ಎದುರಿಸಿದ ಸಂದಿಗ್ಧ ಸನ್ನಿವೇಶಗಳನ್ನು ಅವರು ವಿವರಿಸಿ ರಾಜ್ಯದಲ್ಲಿ ಪಕ್ಷದ ಕಾರ್ಯವನ್ನು ಸರಿದಾರಿಯಲ್ಲಿ ನಿರ್ವಹಿಸಿಕೊಂಡು ಬಂದಿರುವ ಬಗ್ಗೆ ತಮಗೆ ತೃಪ್ತಿ ಇದೆ ಎಂದರು.

ಬಸ್, ವಿದ್ಯುಚ್ಛಕ್ತಿ ದರ ಏರಿಕೆಗೆ ಯುವ ಕಾಂಗ್ರೆ ಟೀಕೆ

ಬೆಂಗಳೂರು, ಅ. 6:- ಬರಗಾಲದ ದವಡೆಗೆ ಸಿಕ್ಕಿನರಳುತ್ತಿರುವ ರಾಜ್ಯಕ್ಕೆ ಬಸ್ ದರ, ವಿದ್ಯುಚ್ಛಕ್ತಿ ದರವನ್ನು ಏರಿಸುವ ನಿರ್ಧಾರ ತೆಗೆದುಕೊಂಡಿರುವ ಜನತಾ ಸರ್ಕಾರವನ್ನು ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿಯು ಟೀಕಿಸಿದೆ.

ಈ ನಿಲುವು ಜನವಿರೋಧಿಯಾಗಿದೆ. ಈ ಎರಡು ವ್ಯವಸ್ಥೆಗಳ ದರ ಏರಿಕೆಯು ಸಾಮಾನ್ಯ ಜನರಿಗೆ ತೊಂದರೆ ನೀಡುವಂತಹದ್ದಾಗಿದೆ. ಪ್ರಜಾ ವಿರೋಧಿ ನೀತಿಯನ್ನು ಆಳುವ ಸರ್ಕಾರ ಕೈಬಿಡದಿದ್ದರೆ ಮುಂದಿನ ಕಾರ್ಯಕ್ರಮಗಳನ್ನು ಯುವಕಾಂಗ್ರೆಸ್ ಹಮ್ಮಿಕೊಳ್ಳಬೇಕಾಗುತ್ತದೆಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಸ್ವಾಗತ

ಸಂಸತ್ ಸದಸ್ಯೆ ತಾರಾದೇವಿಯವರನ್ನು ಕಾಂಗ್ರೆಸ್(ಐ) ಹೈಕಮಾಂಡ್‌ನ ಜಂಟಿ ಕಾರ್ಯದರ್ಶಿಯಾಗಿ ಆಯ್ಕೆ ಮಾಡಿರುವುದನ್ನು ಪ್ರದೇಶ ಯುವ ಕಾಂಗ್ರೆಸ್ ಸ್ವಾಗತಿಸಿದೆ.

ಪಕ್ಷವನ್ನು ಸುಸಂಘಟಿತ ರೀತಿಯಲ್ಲಿ ಕಟ್ಟಲು ಸಮರ್ಥರೆನ್ನಬಹುದಾದ ತಾರಾದೇವಿಯವರನ್ನು ಆಯ್ಕೆ ಮಾಡಿದ ಕಾಂಗ್ರೆಸ್ ಹೈಕಮಾಂಡ್ ಮತ್ತು ಪಕ್ಷದ ಅಧ್ಯಕ್ಷರಿಗೆ ಅಭಿನಂದಿಸಿದೆ.

ಬಸ್ ದರ ಏರಿಕೆ ಪ್ರತಿಕೃತಿ ದಹನ

ಬೆಂಗಳೂರು, ಅ.6– ಸಾರಿಗೆ ಬಸ್ ದರ ಏರಿಕೆಯನ್ನು ವಿರೋಧಿಸಿ ಕನ್ನಡ ಚಳವಳಿ ಕೇಂದ್ರ ಮಂಡಳಿಯು ಸಾರಿಗೆ ಸಚಿವ ಪಿ.ಜಿ.ಆರ್.ಸಿಂಧ್ಯಾ ಅವರ ಪ್ರತಿಕೃತಿಯನ್ನು ಈಚೆಗೆ ದಹನ ಮಾಡಿತು.

ಮೈಸೂರು ಬ್ಯಾಂಕ್ ಸರ್ಕಲ್‌ನಲ್ಲಿ ನಡೆದ ಪ್ರತಿಭಟನಾ ಕಾರ್ಯದಲ್ಲಿ ಸಾರಿಗೆ ಸಚಿವರ ಪ್ರತಿಕೃತಿಯೊಡನೆ, ಸಾರಿಗೆ ಮತ್ತು ವಿದ್ಯುಚ್ಛಕ್ತಿ ನಿಗಮದ ಪ್ರತಿಕೃತಿಗಳನ್ನು ಕೂಡ ಸುಡಲಾಯಿತು.

ಬಸ್‌ದರ, ವಿದ್ಯುಚ್ಛಕ್ತಿ ದರ ಏರಿಕೆ ಕೈಬಿಡದಿದ್ದರೆ ರಾಜ್ಯಾದ್ಯಂತ ಚಳವಳಿ ಹಾಗೂ ಬಸ್ ತಡೆ ಚಳವಳಿ ಮಾಡಲಾಗುವುದೆಂದು ಕನ್ನಡ ಚಳವಳಿ ಮುಖಂಡ ವಾಟಾಳ್‌ನಾಗರಾಜ್ ತಿಳಿಸಿದರು.

ಟಿಕೆಟ್ ಇಲ್ಲದೆ ಪ್ರಯಾಣ ಮಾಡುವ ಚಳವಳಿ ನಡೆಸಲು ಕನ್ನಡ ಚಳವಳಿ ಕೇಂದ್ರ ಮಂಡಳಿ ಯೋಜನೆ ಹಾಕಿಕೊಳ್ಳಲಿದೆ ಎಂದು ತಿಳಿಸಿದ ವಾಟಾಳ್ ಅವರು, ಸಾರಿಗೆ ಸಂಸ್ಥೆಯಲ್ಲಿ ಕಳೆದ 15ವರ್ಷಗಳಲ್ಲಿ ನಡೆದ ಅವ್ಯವಹಾರ ಬಗ್ಗೆ ನ್ಯಾಯಾಂಗ ತನಿಖೆ ನಡೆಸುವಂತೆ ಆಗ್ರಹ ಪಡಿಸಿದರು.

ಬಸ್, ವಿದ್ಯುತ್, ಹಾಲು, ನೀರಿನ ದರ ಏರಿಸುವ ಜನತಾ ಸರ್ಕಾರದ ಜನ ವಿರೋಧಿ ನೀತಿಯನ್ನು ಪ್ರತಿಭಟಿಸಿ ಗ್ರಾಹಕರು ಹೋರಾಡಬೇಕೆಂದು ಅವರು ಕರೆ ನೀಡಿದರು.

'ಸೌಲಭ್ಯಸದುಪಯೋಗ ಮಾಡಿಕೊಳ್ಳಿ'

ಬೆಂಗಳೂರು, ಅ. 6–ಸರ್ಕಾರದ ಸೌಲಭ್ಯಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಂಡು ತಮ್ಮ ಆರ್ಥಿಕ ಮಟ್ಟವನ್ನು ಉತ್ತಮ ಪಡಿಸಿಕೊಳ್ಳುವಂತೆ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ಖಾತೆ ರಾಜ್ಯ ಸಚಿವ ಎಚ್. ಜಿ. ಗೋವಿಂದೇಗೌಡ ಅವರು ಜನತೆಗೆ ಕರೆ ನೀಡಿದ್ದಾರೆ.

ಚಿಕ್ಕಮಗಳೂರಿನಲ್ಲಿ ಆಚರಿಸಲಾದ ಗಾಂಧಿಜಯಂತಿ ಸಮಾರಂಭದಲ್ಲಿ ಅವರು ಮುಖ್ಯ ಅತಿಥಿಯಾಗಿ ಮಾತನಾಡಿದರು. ಚಿಕ್ಕಮಗಳೂರು ಶಾಸಕ ಪಿ. ಬಿ. ಶಂಕರ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾಧಿಕಾರಿ ಬಿ. ಪಾರ್ಥಸಾರಥಿ ಅವರು ಸರ್ಕಾರದ ಸಾಲ ಸೌಲಭ್ಯದ ಬಗ್ಗೆ ವಿವರಿಸಿದರು.

ಕಪ್ಪು ಬ್ಯಾಡ್ಜ್ ಧರಿಸಿ ಬೇಡಿಕೆ ದಿನಾಚರಣೆ

ಹುಬ್ಬಳ್ಳಿ, ಅ. 6–ಅಖಿಲ ಭಾರತೀಯ ರಾಜ್ಯ ಸರಕಾರಿ ನೌಕರರ ಫೆಡರೇಶನ್ ನೀಡಿದ ಕರೆಯನ್ವಯ ರಾಜ್ಯ ಸರಕಾರಿ ನೌಕರರು ಕಪ್ಪು ಬ್ಯಾಡ್ಜನ್ನು ಧರಿಸಿ ಶುಕ್ರವಾರ ಹಾವೇರಿಯಲ್ಲಿ ಬೇಡಿಕೆ ದಿನವನ್ನಾಚರಿಸಿದರು.

ಬ್ರಿಟಿಷ್‌ಸರ್ಕಾರದಿಂದ ಭಾರತಕ್ಕೆ ನಿತ್ಯ 50 ಲ. ರೂ. ನೆರವು

ಬೆಂಗಳೂರು, ಅ. 6– ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಪ್ರತಿದಿನ 50 ಲಕ್ಷ ರೂ.ಗಳು ಬ್ರಿಟಿಷ್ ಸರ್ಕಾರದಿಂದ ಭಾರತಕ್ಕೆ ಆರ್ಥಿಕ ನೆರವಾಗಿ ದೊರೆಯುತ್ತಿವೆ.

ನಗರದ ಕಾಡುಗೋಡಿಯಲ್ಲಿ ಬ್ರಿಟಿಷ್ ಸರ್ಕಾರದ ನೆರವಿನಿಂದ ನೂತನವಾಗಿ ಸ್ಥಾಪಿತಗೊಂಡ ಹಣ್ಣು ಸಂಸ್ಕರಣ ಘಟಕವನ್ನು ಭಾರತದಲ್ಲಿನ ಬ್ರಿಟಿಷ್ ಹೈಕಮಿಷನರ್ ಸರ್ ರಾಬರ್ಟ್ ವೇಡ್ ಅವರು ಸೋಮವಾರ ಉದ್ಘಾಟಿಸಿ, ಈ ವಿಷಯ ತಿಳಿಸಿದರು.

ಬಡತನ ಮತ್ತು ನಿರುದ್ಯೋಗ ನಿವಾರಣೆ ಮಾಡುವಂತಹ ಪ್ರಾಯೋಗಿಕ ಕಾರ್ಯಗಳಿಗೆ ಬ್ರಿಟಿಷ್ ಸರ್ಕಾರ ಈ ನೆರವು ನೀಡುತ್ತಿದೆ ಎಂದು ಅವರು ತಿಳಿಸಿದರು.

ಈ ಹಣ್ಣು ಸಂಸ್ಕರಣ ಘಟಕ ಸ್ಥಾಪನೆಗೆ ಮುಂದೆ ಬಂದ ದಕ್ಷಿಣ ಭಾರತ ಮಹಿಳಾ ಸಂಘವನ್ನು ಅವರು ಶ್ಲಾಘಿಸಿದರು.

ದಸರಾ ಸಂಗೀತೋತ್ಸವ ರಾಜ್ಯಕ್ಕೆ ಅನ್ಯಾಯ

ಬೆಂಗಳೂರು, ಅ. 6– ಮೈಸೂರಿನಲ್ಲಿ ಮಾಸಾಂತ್ಯದಲ್ಲಿ ಆರಂಭವಾಗುವ ದಸರಾ ಸಂಗೀತೋತ್ಸವಕ್ಕೆ ಕಲಾವಿದರನ್ನು ಆಯ್ಕೆ ಮಾಡುವಾಗ ರಾಜ್ಯ ಸರಕಾರ ರಾಜ್ಯದ ಕಲಾವಿದರಿಗೆ ನ್ಯಾಯ ದೊರಕಿಸಿ ಕೊಟ್ಟಿಲ್ಲ ಎಂದು ಕರ್ನಾಟಕ ಗಾನ ಕಲಾ ಪರಿಷತ್ ದೂರಿದೆ.

ಬರಿಯ ಭರವಸೆಗಳ ಹೊರತಾಗಿ ಕರ್ನಾಟಕ ಕಲಾವಿದರಿಗೆ ಆದ್ಯತೆ, ಪ್ರೋತ್ಸಾಹ ಅಥವಾ ಪ್ರಾತಿನಿಧ್ಯವನ್ನು ದೊರಕಿಸಲು ರಾಜ್ಯ ಸರಕಾರ ಏನೂ ಪ್ರಯತ್ನ ಮಾಡಿಲ್ಲ ಎಂದು ಪರಿಷತ್ ಅಧ್ಯಕ್ಷ ಹೊನ್ನಪ್ಪ ಭಾಗವತರ್, ಕಾರ್ಯದರ್ಶಿ ಕೆ. ವೆಂಕಟರಾಂ ಮತ್ತು ಇತರ ಕಲಾವಿದರು ನಿನ್ನೆ ಇಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ಆಪಾದಿಸಿದರು.

ಉತ್ಸವಕ್ಕೆ ಮುಂಬಯಿ, ಕಲ್ಕತ್ತ ಮತ್ತು ಇತರ ರಾಜ್ಯಗಳಿಂದ ಕಲಾವಿದರನ್ನು ಆಹ್ವಾನಿಸಲಾಗುತ್ತಿದೆ; ಅವರಿಗೆ ಸಾಕಷ್ಟು ಗೌರವ ಧನವನ್ನೂ ನೀಡಲಾಗುತ್ತಿದೆ ಎಂದು ನುಡಿದ ಅವರು ಕನಿಷ್ಠ 50 ಪ್ರತಿ ಶತದಷ್ಟಾದರೂ ಪ್ರಾತಿನಿಧ್ಯ ರಾಜ್ಯದ ಕಲಾವಿದರಿಗೆ ಇರಲಿ ಎಂದು ಸರಕಾರಕ್ಕೆ ಮನವಿ ಮಾಡಿದರು.

ಕಲಾವಿದರಿಗೆ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಾನ್ಯತೆ ಒದಗಿಸುವ ಹೆಸರಿನಲ್ಲಿ, ರಾಜ್ಯ ಕಲಾವಿದರು ಪಡೆಯಬೇಕಾಗಿದ್ದ ಸೌಲಭ್ಯಗಳಿಂದ ವಂಚಿತರಾಗಬಾರದು ಎಂದು ಅವರು ಹೇಳಿದರು.

ರಾಜ್ಯ ಕಲಾವಿದರ ಹಿತಾಸಕ್ತಿ ಕಾಯಲು ಪರಿಷತ್ ವಿವಿಧ ಕಾರ್ಯಕ್ರಮ ಹಮ್ಮಿಕೊಂಡಿದೆ ಎಂದು ಪ್ರಕಟಿಸಿದ ಅವರು, ಮುಖ್ಯಮಂತ್ರಿಗೆ ಮನವಿಯೊಂದನ್ನು ಸಲ್ಲಿಸಲಾಗುವುದು, ಸೂಕ್ತ ಪ್ರತಿಕ್ರಿಯೆ ಸಿಗದಿದ್ದಲ್ಲಿ ಕಲಾವಿದರ ಧರಣಿಯನ್ನೂ ನಡೆಸಲಾಗುವುದು ಎಂದರು.

ದಿಲ್ಲಿ ಕರ್ನಾಟಕ ಭವನದಲ್ಲಿ ಗಾಂಧಿ ಜಯಂತಿ

ಬೆಂಗಳೂರು, ಅ. 6– ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ|| ಎಚ್. ಎಲ್. ತಿಮ್ಮೇಗೌಡ ಅವರು ಅ. 2ರಂದು ಹೊಸದಿಲ್ಲಿಯ ಕರ್ನಾಟಕ ಭವನದ ಯುವಕ ಸಂಘದ ಆಶ್ರಯದಲ್ಲಿ ವ್ಯವಸ್ಥೆ ಮಾಡಿದ್ದ ಗಾಂಧಿ ಜಯಂತಿ ಸಮಾರಂಭವನ್ನು ಉದ್ಘಾಟಿಸಿದರು.

ದಿಲ್ಲಿಯಲ್ಲಿ ಕರ್ನಾಟಕದ ಪ್ರಥಮ ವಿಶೇಷ ಕಮಿಷನರ್ ಆಗಿದ್ದ ಲಕ್ಷ್ಮಣ್ ರಾವ್ ಅವರನ್ನೂ ಈ ಸಂದರ್ಭದಲ್ಲಿ ಗೌರವಿಸಲಾಯಿತು. ಕರ್ನಾಟಕ ಭವನದ ಯುವಕ ಸಂಘದ ಅಧ್ಯಕ್ಷ ದಿವಾಕರ್ ಅತಿಥಿ ಸ್ವಾಗತಿಸಿದರು.